ಸಂಪುಟ: 06 ಸಂಚಿಕೆ: 141 ಪುಟಗಳು: 08 ಸೋಮವಾರ 03 ಆಗಸ್ಟ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಇಡೀ ದಿನ ಕೆಲಸದಲ್ಲೇ ನಿರತರಾಗಿರುತ್ತೇವೆ ಅನ್ನುವುದು ಮುಖ್ಯವಲ್ಲ. ಕೆಲಸ ಯಾವುದು ಎಂಬುದು ಮುಖ್ಯವಾಗುತ್ತದೆ, ಸತ್ಕಾರ್ಯದಲ್ಲಿ ತೊಡಗಿಕೊಳ್ಳೋಣ!

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಪೊಲೀಸ್ ಕಾನ್‌ಸ್ಟೆಬಲ್ ಪರೀಕ್ಷೆಯಲ್ಲಿ ಗೊಂದಲ: ಸರ್ಕಾರದ ವೈಫಲ್ಯ ಎಂದ ಆರ್.ಅಶೋಕ



• ಉದಯವಾಹಿನಿ, ಬೆಂಗಳೂರು

ವಿಜಯಪುರದಲ್ಲಿ ನಡೆದ ಪೊಲೀಸ್ ಕಾನ್ ಸ್ಟೆಬಲ್ ನೇಮಕ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ವಿತರಣೆಯಲ್ಲಿ ವಿಳಂಬ, ಒಎಂಆರ್ ಶೀಟ್‌ಗಳ ಗೊಂದಲ ಹಾಗೂ ಅಭ್ಯರ್ಥಿಗಳು ಪರೀಕ್ಷೆಯಿಂದ ಹೊರನಡೆಯುವಂತಾದ ಘಟನೆ ಆಡಳಿತದ ಸಂಪೂರ್ಣ ವೈಫಲ್ಯ ಮತ್ತು ಕ್ಷಮಿಸಲಾಗದ ನಿರ್ಲಕ್ಷ್ಯಕ್ಕೆ ಹಿಡಿದ ಕೈಗನ್ನಡಿ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ವಾಗ್ದಾಳಿ ನಡೆಸಿದ್ದಾರೆ. ಮತ್ತೊಂದು ನೇಮಕಾತಿ ಪರೀಕ್ಷೆ, ಮತ್ತೊಮ್ಮೆ ಕಾಂಗ್ರೆಸ್ ಸರ್ಕಾರದ ವೈಫಲ್ಯ. ಮಗದೊಮ್ಮೆ ರಾಜ್ಯದ ಯುವಕರ ಭವಿಷ್ಯದೊಂದಿಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಚೆಲ್ಲಾಟವಾಡಿದೆ ಎಂದು ಅವರು ಕಿಡಿಕಾರಿದ್ದಾರೆ.

ಸಾವಿರಾರು ಅಭ್ಯರ್ಥಿಗಳು ವರ್ಷಗಳ ಕಾಲ ಶ್ರಮಪಟ್ಟು ಈ ಪರೀಕ್ಷೆಗೆ ಸಿದ್ಧತೆ ನಡೆಸಿದ್ದರು. ಆದರೆ, ಕಾಂಗ್ರೆಸ್ ಸರ್ಕಾರವು ಅಭ್ಯರ್ಥಿಗಳಿಗೆ ಗೊಂದಲ, ಅಸಮರ್ಥ ಆಡಳಿತ ಮತ್ತು ಭಗ್ನಗೊಂಡ ಕನಸುಗಳ ಗುಚ್ಛವನ್ನ ನೀಡಿದೆ' ಎಂದು ಅವರು ಕುಟುಕಿದ್ದಾರೆ.'ಈ ವೈಫಲ್ಯದ ನೈತಿಕ ಹೊಣೆ ಹೊತ್ತು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ತಕ್ಷಣವೇ ರಾಜೀನಾಮೆ ನೀಡಬೇಕು. ಗೊಂದಲವಾದ ಪರೀಕ್ಷೆಯನ್ನು ಸಂಬಂಧಿತ ಕೇಂದ್ರದಲ್ಲಿ ರದ್ದುಗೊಳಿಸಿ ಮರುಪರೀಕ್ಷೆ ನಡೆಸಬೇಕು. ಜತೆಗೆ, ಸ್ವತಂತ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ. 'ಯುವಕರ ಭವಿಷ್ಯ ಹಾಳು ಮಾಡಿದ ಸರ್ಕಾರಕ್ಕೆ ಉತ್ತರದಾಯಿತ್ವ ಯಾರು?, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ, ಗೃಹ ಸಚಿವರಿಂದ ತಕ್ಷಣವೇ ರಾಜೀನಾಮೆ ಪಡೆಯಿರಿ' ಎಂದು ಒತ್ತಾಯಿಸಿದ್ದಾರೆ.

## ಸಲಿಂಗಕಾಮದ ಆಮಿಷ; ಯುವಕರ ದೋಚುತ್ತಿದ್ದ ಗ್ಯಾಂಗ್ ಅರೆಸ್ಟ್

• ಉದಯವಾಹಿನಿ, ಬೆಂಗಳೂರು

ಡೇಟಿಂಗ್ ಆಪ್‌ಗಳ ಮೂಲಕ ಅಮಾಯಕರನ್ನು ಬಲೆಗೆ ಬೀಳಿಸಿ, ಬೆದರಿಸಿ ನಗನಾಣ್ಯ ದರೋಡೆ ಮಾಡುತ್ತಿದ್ದ ಖತರ್ನಾಕ್ ಗ್ಯಾಂಗ್ ಒಂದನ್ನು ಪೊಲೀಸರು ಬಂಧನ ಮಾಡಿದ್ದಾರೆ.

ಎರಡು ತಿಂಗಳ ಹಿಂದೆ ಗ್ರೈಂಡರ್ ಗೇ ಆಪ್ ಮೂಲಕ ಯುವಕನನ್ನು ಪರಿಚಯಿಸಿಕೊಂಡು ಪುಸಲಾಯಿಸಿ ಬೆಂಗಳೂರು ಹೊರವಲಯ ಆನೇಕಲ್ ತಾಲ್ಲೂಕಿನ ಕಲ್ಲುಬಾಳು ಸಮೀಪದ ವಾಸವಿ ಬಡಾವಣೆ ನಿರ್ಜನ ಪ್ರದೇಶಕ್ಕೆ ಕರೆಸಿಕೊಂಡು ಹಲ್ಲೆ ನಡೆಸಿ ನಗನಾಣ್ಯ ದೋಚಿದ್ದ ಆರೋಪಿಗಳನ್ನು ಜಿಗಣಿ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆನೇಕಲ್ ಪಟ್ಟಣದ ನಿವಾಸಿಗಳಾಗಿದ್ದ ವಿಶಾಲ್, ಅಜಯ್, ಸಂಜಯ್ ಮತ್ತು ಸೂರ್ಯ ಬಂಧಿತ ಆರೋಪಿಗಳು.

ಆರೋಪಿಗಳು ಅಪ್ರಾಪ್ತರಾಗಿದ್ದು, ಬಾಲ ನ್ಯಾಯ ಮಂಡಳಿಗೆ ಹಾಜರುಪಡಿಸಲಾಗಿದೆ. ಬೆಂಗಳೂರು ದಕ್ಷಿಣ ತಾಲ್ಲೂಕು ಬನವಾಸಿ ನಿವಾಸಿಯಾದ ದೂರುದಾರ, ನನಗೆ ಮೊಬೈಲ್‌ನಲ್ಲಿ ಅನ್ನು ಉಪಯೋಗಿಸುವ ಅಭ್ಯಾಸವಿತ್ತು.

## ಸೈಟ್ ವಾಪಸ್ ಪಡೆಯುವ ಸರ್ಕಾರದ ಪ್ರಸ್ತಾಪಕ್ಕೆ ತೀವ್ರ ವಿರೋಧ

• ಉದಯವಾಹಿನಿ, ಬೆಂಗಳೂರು

ಐದು ವರ್ಷಗಳೊಳಗೆ ಮನೆ ನಿರ್ಮಿಸದ ಖಾಲಿ ನಿವೇಶನಗಳನ್ನು ವಾಪಸ್ ಪಡೆಯುವ ಅಥವಾ ಅಂತಹ ನಿವೇಶನಗಳಿಗೆ ದುಪ್ಪಟ್ಟು ಆಸ್ತಿ ತೆರಿಗೆ ವಿಧಿಸುವ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸುತ್ತಿರೋದಾಗಿ ರಾಜ್ಯ ಸರ್ಕಾರ ಹೇಳಿರೋದೀಗ ಭಾರಿ ವಿರೋಧಕ್ಕೆ ಕಾರಣವಾಗಿದೆ. ಸರ್ಕಾರದ ಪ್ರಸ್ತಾಪಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಭಿವೃದ್ಧಿಪಡಿಸಿರುವ ವಿವಿಧ ಬಡಾವಣೆಗಳ ನಿವೇಶನ ಮಾಲೀಕರು ಆಕ್ಷೇಪ ವ್ಯಕ್ತಪಡಿಸಿದ್ದು, ಮೂಲ ಸೌಕರ್ಯಗಳೇ ಇಲ್ಲದ ಜಾಗದಲ್ಲಿ ಮನೆ ಕಟ್ಟಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ್ದಾರೆ. ನಾಡಪ್ರಭು ಕೆಂಪೇಗೌಡ ಬಡಾವಣೆಯ ನಿವೇಶನದಾರರೊಬ್ಬರು, 2016ರಲ್ಲೇ ನಿವೇಶನ ಹಂಚಿಕೆಯಾಗಿದೆ. ಆದರೆ ಇಂದಿಗೂ ಶೇ.75ರಷ್ಟು ರಸ್ತೆ ಮಾತ್ರ ವಾಹನ ಸಂಚಾರಕ್ಕೆ ಯೋಗ್ಯವಾಗಿದೆ. ರಸ್ತೆ, ವಿದ್ಯುತ್, ನೀರು ಸೇರಿದಂತೆ ಮೂಲಸೌಕರ್ಯ ಕಾಮಗಾರಿ ಕಳೆದ ಎರಡು-ಮೂರು ವರ್ಷಗಳ ಹಿಂದೆ ವೇಗ ಪಡೆದುಕೊಂಡಿದೆ. ಇಂತಹ ಪರಿಸ್ಥಿತಿಯಲ್ಲಿ ಮನೆ ಕಟ್ಟುವುದು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ್ದಾರೆ.

## ದಿಲ್ಲಿಯಿಂದ ಡಿಕೆಶಿಗೆ ಕರೆ: ಇಂದು ಸಚಿವ ಸಂಪುಟ ವಿಸ್ತರಣೆ ಆಗುತ್ತಾ, ಇಲ್ವಾ?

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯ ರಾಜಕಾರಣದಲ್ಲಿ ಸಚಿವ ಸಂಪುಟ ವಿಸ್ತರಣೆಯ ಸಸ್ಪೆನ್ಸ್ ಇನ್ನೂ ಮುಂದುವರಿದಿದೆ. ಸೋಮವಾರ ಸಂಜೆ ನಾಲ್ಕು ಗಂಟೆಗೆ ಪ್ರಮಾಣವಚನ ಕಾರ್ಯಕ್ರಮ ನಡೆಸುವ ಬಗ್ಗೆ ಮೌಖಿಕ ಮಾಹಿತಿ ನೀಡಲಾಗಿದೆ.

ಆದರೆ, ಈವರೆಗೆ ಯಾವುದೇ ಲಿಖಿತ ಆದೇಶ ಲೋಕಭವನಕ್ಕೆ ತಲುಪಿಲ್ಲ. ಇದೇ ಕಾರಣಕ್ಕೆ ಅಧಿಕಾರಿಗಳೂ ಅಂತಿಮ ಸಿದ್ಧತೆಗೆ ಕೈ ಹಾಕಿಲ್ಲ. ಆದ್ರೆ, ಸಿಎಂ ಡಿಕೆ ಶಿವಕುಮಾರ್ ಸಹ ಯಾವುದೇ ಸುಳಿವು ಬಿಟ್ಟುಕೊಟ್ಟಿಲ್ಲ. ಹೀಗಾಗಿ ಕೇವಲ ಮೌಖಿಕ ಮಾಹಿತಿಯ ಆಧಾರದಲ್ಲಿ ರಾಜ್ಯಮಟ್ಟದ ಕಾರ್ಯಕ್ರಮಕ್ಕೆ ಸಿದ್ಧತೆ ನಡೆಸುವುದು ಸಾಧ್ಯವಿಲ್ಲ ಅನ್ನೋದು ಲೋಕಭವನದ ಸ್ಪಷ್ಟ ನಿಲುವು. ಅಧಿಕೃತ ಪತ್ರ ಬಂದ ನಂತರವೇ ವೇದಿಕೆ, ಭದ್ರತೆ, ಪ್ರೋಟೋಕಾಲ್ ಸೇರಿದಂತೆ ಎಲ್ಲಾ ವ್ಯವಸ್ಥೆ ಆರಂಭಿಸುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಇನ್ನೊಂದೆಡೆ ಸಚಿವ ಸ್ಥಾನದ ಆಕಾಂಕ್ಷಿಗಳಲ್ಲೂ ತೀವ್ರ ಗೊಂದಲ ಮನೆ ಮಾಡಿದೆ. ಸೋಮಾವಾರ ಪ್ರಮಾಣವಚನ ಇದ್ಯಾ? ಇಲ್ಲವಾ ಎನ್ನುವ ಪ್ರಶ್ನೆಗೆ ಅವರ ಬಳಿಯೂ ಉತ್ತರ ಇಲ್ಲ. ಹೈಕಮಾಂಡ್‌ನಿಂದ ಕರೆ ಬರಬಹುದು ಎಂಬ ನಿರೀಕ್ಷೆಯಲ್ಲಿ ಬಹುತೇಕ ಆಕಾಂಕ್ಷಿಗಳು ಕಾದು ಕುಳಿತಿದ್ದಾರೆ.

# ಮಳೆ ಅಬ್ಬರ ಕರಾವಳಿ ತತ್ತರ



• ಉದಯವಾಹಿನಿ, ಬೆಂಗಳೂರು

ಮಲೆನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಮಳೆ ಅಬ್ಬರ ಜೋರಾಗಿದೆ. ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ. ಉಡುಪಿ, ಬೆಳಗಾವಿ, ಕೊಡಗು ಸೇರಿದಂತೆ ಕೆಲವು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ನೀಡಲಾಗಿದ್ದು, ಕರಾವಳಿ ಭಾಗಗಳಲ್ಲಿ ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆ ಹೆಚ್ಚಿರುವುದರಿಂದ ಕಡಲಿಗೆ ಇಳಿಯದಂತೆ ಮೀನುಗಾರರಿಗೆ ಮುನ್ನೆಚ್ಚರಿಕೆ ನೀಡಲಾಗಿದೆ.

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಶನಿವಾರದಿಂದ ಮಳೆಯ ಅಬ್ಬರ ತೀವ್ರಗೊಂಡಿದ್ದು, ಕರಾವಳಿಯಾದ್ಯಂತ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಬೆಳ್ತಂಗಡಿ ತಾಲ್ಲೂಕಿನ ಮುಂಡಾಜೆಯಲ್ಲಿ ಅತ್ಯಂತ ಗರಿಷ್ಠ 348.5 ಮಿ.ಮೀ ಭಾರೀ ಮಳೆ ದಾಖಲಾಗಿದೆ.

**1** ಸುಬ್ರಹ್ಮಣ್ಯ ರೋಡ್ ಮತ್ತು ಸಕಲೇಶಪುರ ಘಾಟ್ ವಿಭಾಗದಲ್ಲಿ ಭೂಕುಸಿತ.

**2** ಮಂಗಳೂರು-ಬೆಂಗಳೂರು ರೈಲುಗಳ ಸಂಚಾರ ಸ್ಥಗಿತ.

**3** ಪಂಚಗಂಗಾ ಸೇರಿದಂತೆ ಹಲವು ಎಕ್ಸ್‌ಪ್ರೆಸ್ ರೈಲುಗಳ ಸೇವೆ ವಿವಿಧ ನಿಲ್ದಾಣಗಳಲ್ಲಿ ಭಾಗಶಃ ರದ್ದಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಪ್ರಕೃತಿಯ ವಿಕೋಪಕ್ಕೆ ಕಾರಣವಾಗುವ ಮಟ್ಟಿಗೆ ಧಾರಾಕಾರ ಮಳೆ ಸುರಿಯುತ್ತಿದೆ. ಕಲ್ಮಂಜದಲ್ಲಿ 283.5 ಮಿ.ಮೀ ಹಾಗೂ ಮಂಗಳೂರಿನ ನೆಲ್ಲಿಕಾರಿನಲ್ಲಿ 207 ಮಿ.ಮೀ ಅತ್ಯಧಿಕ ಮಳೆ ಬಿದ್ದಿದೆ. ಬೆಳ್ತಂಗಡಿ ತಾಲ್ಲೂಕು ಕೇಂದ್ರದಲ್ಲಿ 179.6 ಮಿ.ಮೀ ಮತ್ತು ಸುಳ್ಯ ತಾಲ್ಲೂಕಿನ ಸಂಪಾಜೆಯಲ್ಲಿ 169 ಮಿ.ಮೀ ಮಳೆಯಾಗಿದೆ. ಅತ್ತ ಉಡುಪಿ ಜಿಲ್ಲೆಯಲ್ಲೂ ಕಳೆದೆರಡು ದಿನಗಳಿಂದ ಬಿಡುವಿಲ್ಲದೆ ಸುರಿಯುತ್ತಿರುವ ಮಳೆಗೆ ನದಿ-ತೊರೆಗಳು ಮೈದುಂಬಿ ಹರಿಯುತ್ತಿವೆ. ಕಾರ್ಕಳ ತಾಲ್ಲೂಕಿನ ಮಾಳ ಪ್ರದೇಶದಲ್ಲಿ ಬರೊಬ್ಬರಿ 210.5 ಮಿ.ಮೀ ಮಳೆಯಾಗಿದ್ದರೆ, ಮೂಡಾರು (ಬಜಗೋಳಿ) ಭಾಗದಲ್ಲಿ 185.5 ಮಿ.ಮೀ, ನಲ್ಲೂರಿನಲ್ಲಿ 167.5 ಮಿ.ಮೀ ಹಾಗೂ ಶೀರ್ಲಾಲು ಭಾಗದಲ್ಲಿ 160.5 ಮಿ.ಮೀ ಭಾರಿ ಮಳೆ ದಾಖಲಾಗಿದೆ. ಕುಂದಾಪುರ ತಾಲ್ಲೂಕಿನ ಮಡಮಕ್ಕಿಯಲ್ಲಿ 163.5 ಮಿ.ಮೀ ಮಳೆಯಾಗಿದೆ. ಕರಾವಳಿ ಜಿಲ್ಲೆಗಳಾದ್ಯಂತ ನಿರಂತರವಾಗಿ ಸುರಿಯುತ್ತಿರುವ ಈ ಮಳೆಯಿಂದಾಗಿ ತಗ್ಗು ಪ್ರದೇಶಗಳು ಜಲಾವೃತಗೊಂಡಿದ್ದು, ನದಿ ತೀರದ ನಿವಾಸಿಗಳು ಹಾಗೂ ಸಾರ್ವಜನಿಕರು ತೀವ್ರ ಎಚ್ಚರಿಕೆಯಿಂದ ಇರುವಂತೆ ಸೂಚಿಸಲಾಗಿದೆ. ಮುಂದಿನ ದಿನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆ ಇರುವುದರಿಂದ ಅಧಿಕಾರಿಗಳು ಸನ್ನದ್ಧರಾಗಿರುವಂತೆ ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ. ಸೂಚಿಸಿದ್ದಾರೆ.

ಈ ಕುರಿತು ಶನಿವಾರ ಅಧಿಕಾರಿಗಳೊಂದಿಗೆ ಆನ್‌ಲೈನ್ ಸಭೆ ನಡೆಸಿ, ಮಳೆ ಅನಾಹುತಗಳನ್ನು ನಿರ್ವಹಿಸಲು ತಾಲ್ಲೂಕು ಆಡಳಿತಗಳು ದಿನದ 24 ಗಂಟೆಗಳ ಕಾಲವೂ ಸಾರ್ವಜನಿಕರ ಸೇವೆಗೆ ಲಭ್ಯವಾಗಬೇಕು. ಕಂಟ್ರೋಲ್ ರೂಂಗಳು ದಿನಪೂರ್ತಿ ಕಾರ್ಯ ನಿರ್ವಹಿಸಬೇಕು ಎಂದು ಸೂಚನೆ ನೀಡಿದರು. ಜಿಲ್ಲೆಯಲ್ಲಿ ಗುಡ್ಡ ಕುಸಿತ, ಮಣ್ಣು ಜರಿತ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿವೆ.

ಈಗಾಗಲೇ ಗುರುತಿಸಿರುವ ಸಂಭಾವ್ಯ ಕುಸಿತ ಸ್ಥಳಗಳಲ್ಲಿ ನಿಗಾವಹಿಸಬೇಕು. ಅಗತ್ಯ ಬಿದ್ದರೆ, ಮುಂಜಾಗ್ರತಾ ಕ್ರಮವಾಗಿ ಅಪಾಯದ ಸಾಧ್ಯತೆ ಇರುವ ಮನೆಗಳಲ್ಲಿ ವಾಸಿಸುತ್ತಿರುವವರನ್ನು ಸ್ಥಳಾಂತರಿಸಬೇಕು. ಮಣ್ಣು ಜರಿಯುವ ಸಾಧ್ಯತೆಗಳಿರುವ ಸ್ಥಳಗಳಲ್ಲಿ ಮರಳು ಚೀಲಗಳನ್ನು ಇಟ್ಟು ತಾತ್ಕಾಲಿಕ ಕ್ರಮ ಕೈಗೊಳ್ಳಬೇಕು. ಖಾಸಗಿ ಜಮೀನುಗಳಲ್ಲೂ ತಾತ್ಕಾಲಿಕ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

### 24 ಗಂಟೆಯೊಳಗೆ ಪರಿಹಾರ

ಪ್ರಾಕೃತಿಕ ವಿಕೋಪದಿಂದ ಸಾವನ್ನಪ್ಪಿದವರ ಕುಟುಂಬಗಳಿಗೆ 24 ಗಂಟೆಯೊಳಗೆ ಪರಿಹಾರ ಚೆಕ್ ನೀಡಬೇಕು. ಮಳೆ ಅನಾಹುತದಿಂದ ಸ್ಥಳಾಂತರಗೊಂಡವರಿಗೆ ಅಗತ್ಯ ಸೌಲಭ್ಯಗನ್ನು ದೊರಕಿಸಲು ಗಮನ ಹರಿಸಬೇಕು. ಅಗ್ನಿಶಾಮಕ, ಎಸ್.ಡಿ.ಆರ್.ಎಫ್. ಮತ್ತು ಎನ್.ಡಿ.ಆರ್.ಎಫ್. ತಂಡಗಳು ಸದಾ ಸನ್ನದ್ಧವಾಗಿರಬೇಕು ಎಂದು ಅವರು ಸೂಚಿಸಿದರು. ಚಾರ್ಮಾಡಿ, ಸಂಪಾಜೆ, ಶಿರಾಡಿ ಸೇರಿದಂತೆ ಪ್ರಮುಖ ಹೆದ್ದಾರಿಗಳಲ್ಲಿ ಭೂಕುಸಿತ, ಗುಡ್ಡ ಜರಿತದಂತಹ ಪ್ರಕರಣಗಳು ಸಂಭವಿಸಿದರೆ ಅವುಗಳನ್ನು ತೆರವುಗೊಳಿಸಲು ತುರ್ತು ಕ್ರಮ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಅಗತ್ಯ ಮೂಲಸೌಕರ್ಯಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು. ಇದುವರೆಗೆ ಜಿಲ್ಲೆಯಲ್ಲಿ ಹೆದ್ದಾರಿ ತಡೆಯಂತಹ ಯಾವುದೇ ಪ್ರಕರಣಗಳು ವರದಿಯಾಗಿಲ್ಲ ಎಂದು ದರ್ಶನ್ ಎಚ್.ವಿ. ಹೇಳಿದರು.





### ಅಪಾಯದತ್ತ ನೇತ್ರಾವತಿ ನೀರಿನ ಮಟ್ಟ

ಸದ್ಯ ನದಿಯ ನೀರಿನ ಮಟ್ಟ 8.4 ಮೀಟರ್ ದಾಖಲಾಗಿದ್ದು, 8.5 ಮೀಟರ್ ಅಪಾಯದ ಮಟ್ಟದ ಸೂಚ್ಯಂಕವಾಗಿರುವ ಹಿನ್ನೆಲೆಯಲ್ಲಿ ತಾಲ್ಲೂಕು ಆಡಳಿತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ. ಭಾರೀ ಮಳೆಯ ಜೊತೆಗೆ ಎ.ಎಂ.ಆರ್. ಹಾಗೂ ಎಂ.ಆರ್.ಪಿ.ಎಲ್. ನೀರಕಟ್ಟೆ ಡ್ಯಾಂಗಳಿಂದಲೂ ನೀರು ಹರಿಬಿಡಲಾಗಿರುವುದರಿಂದ ನದಿಯ ಹರಿವು ಮತ್ತಷ್ಟು ಹೆಚ್ಚಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪರಿಸ್ಥಿತಿಯನ್ನು ಜಿಲ್ಲಾಡಳಿತ ಹಾಗೂ ತಾಲ್ಲೂಕು ಆಡಳಿತ ನಿರಂತರವಾಗಿ ಪರಿಶೀಲಿಸುತ್ತಿದ್ದು, ಅಗತ್ಯ ಮುನ್ನೆಚ್ಚರಿಕಾ ಸಿದ್ಧತೆಗಳನ್ನು ಮಾಡಿಕೊಂಡಿದೆ. ನದಿ ನೀರು ಏರಿಕೆಯಾಗಿರುವ ಪರಿಣಾಮ ಬಂಟ್ವಾಳ ಪೇಟೆಯ ಮೂಲಕ ಜಕ್ರಿಬೆಟ್ಟು ಸಂಪರ್ಕಿಸಿ ಬೆಳ್ತಂಗಡಿ ಕಡೆಗೆ ಸಾಗುವ ಹೆದ್ದಾರಿಯ ಕೋಟೆಕಣಿ ಪ್ರದೇಶದಲ್ಲಿ ರಸ್ತೆ ಮೇಲೆ ನೀರು ಹರಿದಿದ್ದು, ರಸ್ತೆ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದೆ.

### ಅಪಾಯ ಮಟ್ಟ ಮೀರಿದ ನದಿಗಳು

- ಕರಾವಳಿಯಲ್ಲಿ ವರುಣಾರ್ಭಟ
- ಅಪಾಯ ಮಟ್ಟ ಮೀರಿದ ನದಿಗಳು
- ಜನಜೀವನ ಅಸ್ತವ್ಯಸ್ತ
- ಸುಬ್ರಹ್ಮಣ್ಯ ಘಾಟ್ ರೈಲ್ವೆ ಮಾರ್ಗದಲ್ಲಿ ತಡರಾತ್ರಿ ಭೂಕುಸಿತ ಬೆಂಗಳೂರು ಮಂಗಳೂರು ಮಾರ್ಗದ ಹಲವು
- ರೈಲುಗಳ ಸಂಚಾರ ಸ್ಥಗಿತ!

### ಬೆಳ್ತಂಗಡಿಯಲ್ಲೂ ವಿಪರೀತ ಮಳೆ

ಬೆಳಗ್ಗಿನಿಂದ ಸುರಿಯುತಿದ್ದು, ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ತಾಲ್ಲೂಕಿನ ನಾನಾ ಭಾಗಗಳಲ್ಲಿ ಭಾರೀ ಅನಾಹುತಗಳು ಸಂಭವಿಸುತ್ತಿವೆ. ಲಾಯಿಲ ಗ್ರಾಮದ ಪುತ್ರಬೈಲು, ಗುರಿಂಗಾನ ಹೊಳೆಬದಿಯಲ್ಲಿ ಹಲವಾರು ಮನೆಗಳಿಗೆ ನದಿ ನೀರು ನುಗ್ಗಿದ ಪರಿಣಾಮ ಅಪಾರ ಹಾನಿ ಸಂಭವಿಸಿದೆ. ಬೆಳ್ತಂಗಡಿ ಕಿಲ್ಲೂರು ರಸ್ತೆ ಸಂಚಾರಕ್ಕೆ ಕೆಲಹೊತ್ತು ಅಡಚಣೆ ಉಂಟಾಗಿದೆ.





## ಕಾವೇರಿ ನೀರಿನ ವಿಚಾರದಲ್ಲಿ ರಾಜ್ಯದ ಹಿತಾಸಕ್ತಿ ರಕ್ಷಣೆಗೆ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು : ಟಿ.ಎ.ಶರವಣ

• ಉದಯವಾಹಿನಿ, ಬೆಂಗಳೂರು

ಕಾವೇರಿ ನದಿ ನೀರಿನ ವಿಚಾರದಲ್ಲಿ ರಾಜ್ಯದ ಹಿತಾಸಕ್ತಿ ರಕ್ಷಣೆಗೆ ರಾಜ್ಯ ಸರ್ಕಾರ ತಕ್ಷಣ ಸಮಗ್ರ ಕ್ರಮ ಕೈಗೊಳ್ಳಬೇಕು ಎಂದು ವಿಧಾನ ಪರಿಷತ್ ನ ಜೆಡಿಎಸ್ ಶಾಸಕಾಂಗ ಪಕ್ಷದ ಉಪ ನಾಯಕರು ಟಿ . ಎ.ಶರವಣ ಒತ್ತಾಯಿಸಿದ್ದಾರೆ. ಸರ್ವ ಪಕ್ಷದ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕದ ಪ್ರಸ್ತುತ ಜಲಾಶಯಗಳಲ್ಲಿ ನೀರಿನ ಒಳಹರಿವು ಹಾಗೂ ಸಂಗ್ರಹಣೆಯ ಕೊರತೆಯನ್ನು ಪರಿಗಣಿಸಿ, ರಾಜ್ಯದ ಕುಡಿಯುವ ನೀರು, ರೈತರ ಹಿತಾಸಕ್ತಿ ರಕ್ಷಣೆಗೆ ರಾಜ್ಯ ಸರ್ಕಾರ ತಕ್ಷಣವೇ ಸಮಗ್ರ ಹಾಗೂ ಕಾನೂನುಬದ್ಧ ಕ್ರಮಗಳನ್ನು ಕೈಗೊಳ್ಳಬೇಕೆಂದರು.



ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹೊರಡಿಸಿರುವ ನೀರು ಬಿಡುಗಡೆ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿ, ಮಳೆಯ ಅಭಾವ ಹಾಗೂ ವಾಸ್ತವಿಕ ನೀರಿನ ಲಭ್ಯತೆಯನ್ನು ಆಧರಿಸಿದ ವೈಜ್ಞಾನಿಕ ಸಂಕಷ್ಟ ಹಂಚಿಕೆ ಸೂತ್ರವನ್ನು ಜಾರಿಗೆ ತರಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು.ರಾಷ್ಟ್ರೀಯ ಜಲ ನೀತಿ ಹಾಗೂ ಸುಪ್ರೀಂ ಕೋರ್ಟ್ ತೀರ್ಪುಗಳ ಅನ್ವಯ ಸಂಕಷ್ಟದ ಸಂದರ್ಭಗಳಲ್ಲಿ ಕುಡಿಯುವ ನೀರಿಗೆ ಮೊದಲ ಆದ್ಯತೆ ನೀಡಬೇಕು, ಬೆಂಗಳೂರು ಸೇರಿದಂತೆ ಕಾವೇರಿ ಕೊಳ್ಳದ ನಗರ ಹಾಗೂ ಗ್ರಾಮೀಣ ಪ್ರದೇಶಗಳ ಕುಡಿಯುವ ನೀರಿನ ಅಗತ್ಯವನ್ನು ಯಾವುದೇ ಕಾರಣಕ್ಕೂ ಕಡೆಗಣಿಸಬಾರದು ಎಂದು ಅವರು ಹೇಳಿದರು. ಮಳೆ ಪ್ರಮಾಣ, ಜಲಾಶಯಗಳ ನೀರಿನ ಮಟ್ಟ ಹಾಗೂ ತಜ್ಞರ ವರದಿಗಳ ಆಧಾರದ ಮೇಲೆ ಮಾತ್ರ ವೈಜ್ಞಾನಿಕ ನಿರ್ಧಾರಗಳನ್ನು ಕೈಗೊಳ್ಳಬೇಕು. ಮೇಕೆದಾಟು ಸಮತೋಲನ ಜಲಾಶಯ ಯೋಜನೆಗೆ ಕೇಂದ್ರ ಸರ್ಕಾರದಿಂದ ಶೀಘ್ರ ಅನುಮತಿ ದೊರಕುವಂತೆ ರಾಜ್ಯದ ಎಲ್ಲಾ ಪಕ್ಷಗಳು ಒಗ್ಗಟ್ಟಿನಿಂದ ಪ್ರಯತ್ನಿಸಬೇಕು. ರಾಜ್ಯದ ಸಂಸದರು ಹಾಗೂ ಎಲ್ಲಾ ರಾಜಕೀಯ ಪಕ್ಷಗಳ ನಾಯಕರನ್ನೊಳಗೊಂಡ ನಿಯೋಗವು ಪ್ರಧಾನಮಂತ್ರಿ ಹಾಗೂ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಿ ಕರ್ನಾಟಕದ ವಾಸ್ತವ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡಬೇಕು. ಕಾವೇರಿ ವಿವಾದದಲ್ಲಿ ರಾಜ್ಯದ ಪರವಾಗಿ ಪರಿಣಾಮಕಾರಿ ವಾದ ಮಂಡಿಸಲು ಹಿರಿಯ ವಕೀಲರು, ನಿವೃತ್ತ ನೀರಾವರಿ ಎಂಜಿನಿಯರ್‌ಗಳು ಹಾಗೂ ಜಲತಜ್ಞರನ್ನು ಒಳಗೊಂಡ ಬಲಿಷ್ಠ ಕಾನೂನು ಮತ್ತು ತಾಂತ್ರಿಕ ಸಲಹಾ ಸಮಿತಿಯನ್ನು ರಚಿಸಬೇಕು. ರಾಜ್ಯದ ಹಿತಾಸಕ್ತಿ ಸಂಬಂಧಿತ ಎಲ್ಲಾ ಅಂತರ್ ರಾಜ್ಯ ಜಲ ವಿವಾದಗಳಿಗೆ ಮಾರ್ಗದರ್ಶನ ನೀಡಲು ಶಾಶ್ವತ ಸಲಹಾ ಸಮಿತಿಯನ್ನೂ ಸ್ಥಾಪಿಸಬೇಕು ಎಂದು ಅವರು ಒತ್ತಾಯಿಸಿದರು. ರೈತರಿಗೆ ತಕ್ಷಣವೇ ವಿಶೇಷ ಬೆಳೆ ಪರಿಹಾರ ಪ್ಯಾಕೇಜ್ ಘೋಷಿಸಬೇಕು. ಜೊತೆಗೆ, ಕರ್ನಾಟಕ ಎದುರಿಸುತ್ತಿರುವ ನೀರಿನ ಅಭಾವದ ನೈಜ ಪರಿಸ್ಥಿತಿಯನ್ನು ರಾಷ್ಟ್ರೀಯ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಬಿಂಬಿಸಲು ರಾಜ್ಯ ಸರ್ಕಾರವು ಅಧಿಕೃತ ಶ್ವೇತಪತ್ರವನ್ನು ಬಿಡುಗಡೆ ಮಾಡಬೇಕು.ರಾಜ್ಯದ ಹಿತಾಸಕ್ತಿ, ರೈತರ ಕಲ್ಯಾಣ ಹಾಗೂ ಕುಡಿಯುವ ನೀರಿನ ಭದ್ರತೆಯನ್ನು ಕಾಪಾಡುವ ನಿಟ್ಟಿನಲ್ಲಿ ಸರ್ಕಾರ ಮೇಲ್ಕಂಡ ಎಲ್ಲ ಕ್ರಮಗಳನ್ನು ತಕ್ಷಣ ಜಾರಿಗೆ ತರಬೇಕೆಂದು ಅವರು ಆಗ್ರಹಿಸಿದರು.

## ಪೊಲೀಸ್ ಉಪಾಧೀಕ್ಷಕರು, ಪೊಲೀಸ್ ನಿರೀಕ್ಷಕರ ವರ್ಗಾವಣೆಗೆ ಮಾರ್ಗಸೂಚಿ ಹೊರಡಿಸಿದ ರಾಜ್ಯ ಸರ್ಕಾರ

• ಉದಯವಾಹಿನಿ, ಬೆಂಗಳೂರು



ಪೊಲೀಸ್ ಇಲಾಖೆಯ ಅಧಿಕಾರಿಗಳು, ನೌಕರರ ವರ್ಗಾವಣೆಗೆ ರಾಜ್ಯ ಸರ್ಕಾರ ಮಾರ್ಗಸೂಚಿ ಹೊರಡಿಸಿದೆ. ಈ ಸಂಬಂಧ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಮಾಹಿತಿ ನೀಡಿದ್ದು, ಪೊಲೀಸ್ ಉಪಾಧೀಕ್ಷಕರು (ಸಿವಿಲ್) ಮತ್ತು ಪೊಲೀಸ್ ನಿರೀಕ್ಷಕ (ಸಿವಿಲ್) ಹುದ್ದೆಗಳ ವರ್ಗಾವಣೆಗೆ ಸಂಬಂಧಪಟ್ಟಂತೆ ಮಾರ್ಗಸೂಚಿಗಳನ್ನು ನಿಗದಿ ಪಡಿಸಿ ಆದೇಶ ಹೊರಡಿಸಲಾಗಿದೆ ಎಂದು ತಿಳಿಸಿದ್ದಾರೆ. ಪೊಲೀಸ್ ಉಪಾಧೀಕ್ಷಕರು (ಸಿವಿಲ್) ಮತ್ತು ಪೊಲೀಸ್ ನಿರೀಕ್ಷಕರ (ಸಿವಿಲ್) ವರ್ಗಾವಣೆ ಮಾರ್ಗಸೂಚಿಗೆ ಸಂಬಂಧಿಸಿ ಒಳಾಡಳಿತ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ ಅವರು ಆದೇಶ ಹೊರಡಿಸಿದ್ದಾರೆ. ಪೊಲೀಸ್ ಉಪಾಧೀಕ್ಷಕರು (ಸಿವಿಲ್) ಹುದ್ದೆಗೆ ಮುಂಬಡ್ತಿ ಹೊಂದಿದ ತರುವಾಯ ಕಡ್ಡಾಯವಾಗಿ ಕನಿಷ್ಟ 02 ವರ್ಷಗಳ ಸೇವೆಯನ್ನು ಡಿವೈಎಸ್‌ಪಿ ವೃಂದದ ಪೊಲೀಸ್ ಉಪಾಧೀಕ್ಷಕರು (ಸಿವಿಲ್) ಮತ್ತು ಪೊಲೀಸ್ ನಿರೀಕ್ಷಕರು (ಸಿವಿಲ್) ಬೆಂಗಳೂರು ನಗರ/ ಮಂಗಳೂರು ನಗರ/ ಮೈಸೂರು ನಗರ/ ಹುಬ್ಬಳ್ಳಿ-ಧಾರವಾಡ ನಗರ / ಬೆಳಗಾವಿ ನಗರ/ ಕಲಬುರಗಿ ನಗರ ಗಳಂತಹ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಸಂಚಿತವಾಗಿ ಗರಿಷ್ಠ ಐದು ವರ್ಷಗಳ ಅವಧಿಗೆ ಮಾತ್ರ ಕಾರ್ಯಕಾರಿ ಹುದ್ದೆಗಳಲ್ಲಿ (ಕಾನೂನು ಸುವ್ಯವಸ್ಥೆ, ಸಂಚಾರ, ಸಿಸಿಬಿ, ರೈಲ್ವೆ, ಸೈಬರ್ ಮತ್ತು ಮಹಿಳಾ) ಸೇವೆ ಸಲ್ಲಿಸಲು ಅರ್ಹರಾಗಿರುತ್ತಾರೆ. ಪ್ರಸ್ತುತ ರೈಲ್ವೆ, ಸೈಬರ್ ಮತ್ತು ಮಹಿಳಾ ವಿಭಾಗ/ಪೊಲೀಸ್ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಉಪಾಧೀಕ್ಷಕರು (ಸಿವಿಲ್) ಮತ್ತು ಪೊಲೀಸ್ ನಿರೀಕ್ಷಕರು (ಸಿವಿಲ್) ಅಧಿಕಾರಿಗಳು, ಅವರ ಅವಧಿ ಪೂರ್ಣಗೊಳಿಸಿದ ನಂತರ ಅವರುಗಳಿಗೆ ಈ ನಿಬಂಧನೆ ಅನ್ವಯವಾಗುತ್ತದೆ. ಮೇಲ್ಕಂಡ ಹುದ್ದೆಗಳಲ್ಲಿ ಪೊಲೀಸ್ 05 (2) ಕಮಿಷನರೇಟ್ ವ್ಯಾಪ್ತಿಯ ಕಾರ್ಯಕಾರಿ ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ಅಧಿಕಾರಿಗಳನ್ನು ಕಡ್ಡಾಯವಾಗಿ ಸಂಬಂಧಿಸಿದ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಿಂದ ವರ್ಗಾಯಿಸಿ, ಇತರೆ ಘಟಕಗಳಲ್ಲಿನ ಹುದ್ದೆಗಳಲ್ಲಿ ಕನಿಷ್ಠ 05 (ಐದು) ವರ್ಷಗಳ ಕಾಲ ನೇಮಿಸತಕ್ಕದ್ದು.ಆನಂತರ, ಸಂಬಂಧಿಸಿದ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ಹೊರಗಿನ ಘಟಕಗಳಲ್ಲಿ 05 ವರ್ಷಗಳ ಕಾಲ ಪೂರ್ಣಗೊಳಿಸಿದ ನಂತರ ಮಾತ್ರ ಸದರಿ ಅಧಿಕಾರಿಗಳು ಪುನಃ ಆಯಾ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ ಹುದ್ದೆಗಳ ಪರಿಗಣನೆಗೆ ಅರ್ಹತೆಯನ್ನು ಹೊಂದುತ್ತಾರೆ.

## ಕಬಿನಿ ಜಲಾಶಯದಲ್ಲಿ ಒಳಹರಿವು ಹೆಚ್ಚಳ, ನದಿಪಾತ್ರದ ಜನರಿಗೆ ಮುನ್ನೆಚ್ಚರಿಕೆ

• ಉದಯವಾಹಿನಿ, ಬೆಂಗಳೂರು

ಕೇರಳದ ವೈನಾಡು ಹಾಗೂ ಕೊಡಗು ಸೇರಿದಂತೆ ಕಬಿನಿ ಜಲಾನಯನ ಪ್ರದೇಶದಲ್ಲಿ ಮುಂಗಾರು ಮಳೆ ಚುರುಕುಗೊಂಡಿರುವ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯ ಹೆಚ್‌ಡಿ ಕೋಟೆ ತಾಲ್ಲೂಕಿನ ಬೀಚನಹಳ್ಳಿಯಲ್ಲಿರುವ ಕಬಿನಿ ಜಲಾಶಯಕ್ಕೆ ನೀರಿನ ಒಳಹರಿವು ಗಣನೀಯವಾಗಿ ಹೆಚ್ಚಾಗಿದ್ದು, ಈಗಾಗಲೇ ಜಲಾಶಯದಿಂದ ನೀರನ್ನು ಹೊರಬಿಡಲಾಗುತ್ತಿದ್ದು, ನದಿಪಾತ್ರದ ಜನರು ಎಚ್ಚರಿಕೆಯಿಂದಿರಲು ಸೂಚನೆ ನೀಡಲಾಗಿದೆ.ಈ ಸಂಬಂಧ ಜಲಸಂಪನೂಲ ಸಚಿವ ರಾಮಲಿಂಗಾರೆಡ್ಡಿ ಅವರು ಅಧಿಕಾರಿಗಳ ಜೊತೆ ನಿರಂತರ ಸಂಪರ್ಕದಲ್ಲಿದ್ದು, ಜಲಾಶಯ ಭರ್ತಿಯಾಗುತ್ತಿದ್ದಂತೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನೀರು ತಗ್ಗು ಪ್ರದೇಶದಲ್ಲಿರುವ ನಾಲೆಗಳು ಮತ್ತು ಕೆರೆಗಳಿಗೆ ತಕ್ಷಣವೇ ನೀರು ಹರಿಸಬೇಕೆಂದು ಸೂಚಿಸಿದ್ದಾರೆ. ಅಗತ್ಯವಿರುವ ಕಡೆ ನಾಲೆಗಳು ಮತ್ತು ಕೆರೆಗಳಿಗೆ ನೀರು ತುಂಬಿಸಿ ಕುಡಿಯುವ ನೀರಿಗೆ ಮೊದಲ ಪ್ರಶಸ್ತಿ ನೀಡಬೇಕೆಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ಕೊಟ್ಟಿದ್ದಾರೆ.ಕಳೆದ ಕೆಲವು ತಿಂಗಳುಗಳ ಹಿಂದೆ



ಬೇಸಿಗೆಯ ಆರಂಭದಲ್ಲಿ ಪೂರ್ವ ಮುಂಗಾರು ಕೈಕೊಟ್ಟಿದ್ದರಿಂದ ಕಬಿನಿ ಜಲಾಶಯದ ನೀರಿನ ಮಟ್ಟ ಕುಸಿದು, ಜಲಕ್ಷಾಮದ ಭೀತಿ ಎದುರಾಗಿತ್ತು. ಆದರೆ, ಜುಲೈ ಅಂತ್ಯ ಹಾಗೂ ಆಗಸ್ಟ್ ಆರಂಭದಲ್ಲಿ ಕೇರಳದ ವೈನಾಡಿನಲ್ಲಿ ಮಳೆರಾಯ ಅಬ್ಬರಿಸುತ್ತಿರುವುದರಿಂದ ಜಲಾಶಯಕ್ಕೆ ಒಂದೇ ಸಮನೆ ಲಕ್ಷಾಂತರ ಕ್ಯೂಸೆಕ್ ನೀರು ಹರಿದುಬರುತ್ತಿದೆ.


ಜಲಾಶಯವು ಗರಿಷ್ಠ ಮಟ್ಟವನ್ನು (2284 ಅಡಿ) ತಲುಪುತ್ತಿರುವ ಕಾರಣ, ಸುರಕ್ಷತೆಯ ದೃಷ್ಟಿಯಿಂದ ಜಲಾಶಯಕ್ಕೆ ಬರುವ ಹೆಚ್ಚುವರಿ ನೀರನ್ನು ಯಾವುದೇ ಕ್ಷಣದಲ್ಲಿ ನದಿ ಪಾತ್ರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹರಿಸಲಾಗುವುದು.

## ರಾಜ್ಯದಲ್ಲಿನ 'ಎ' ವರ್ಗ ಮತ್ತು 'ಬಿ' ವರ್ಗದ ದೇವಸ್ಥಾನಗಳ ಹೆಸರಿಗೆ ಭೂಮಿ ಖರೀದಿಸಲು ಸೂಚನೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿನ 'ಎ' ವರ್ಗ ಮತ್ತು 'ಬಿ' ವರ್ಗದ ದೇವಸ್ಥಾನಗಳ ಹೆಸರಿಗೆ ಭೂಮಿ ಖರೀದಿಸುವಂತೆ ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವ ಡಾ.ಜಿ.ಪರಮೇಶ್ವರ್ ಸೂಚಿಸಿದರು. ವಿಧಾನಸೌಧದಲ್ಲಿ ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆ ನಡೆಸಿ, ಸದಸ್ಯರೊಂದಿಗೆ ಸುದೀರ್ಘವಾಗಿ ಚರ್ಚಿಸಿದ ಬಳಿಕ ಅಗತ್ಯ ನಿರ್ದೇಶನಗಳನ್ನು ನೀಡಿದರು. ದೇವಸ್ಥಾನಗಳಲ್ಲಿ ಸಾಕಷ್ಟು ಹಣವಿದೆ. ಅಭಿವೃದ್ಧಿ ಕಾರ್ಯಗಳ ಜೊತೆಗೆ ದೇವಸ್ಥಾನದ ಹೆಸರಿಗೆ ಭೂಮಿ ಖರೀದಿಸಬೇಕು. ಈ ಆಸ್ತಿ ಶಾಶ್ವತವಾಗಿ ದೇವಸ್ಥಾನಕ್ಕೆ ಉಳಿಯುತ್ತದೆ. ಇದರಿಂದ ಭಕ್ತರಿಗೆ ಮೂಲಸೌಕರ್ಯ ವ್ಯವಸ್ಥೆ ಕಲ್ಪಿಸುವುದು ಸೇರಿದಂತೆ ದೇವಸ್ಥಾನದ ಎಲ್ಲಾ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಮತ್ತಷ್ಟು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ದೇವಸ್ಥಾನಗಳ ಹುಂಡಿ ಹಣ ದುರುಪಯೋಗ ತಡೆಯುವ ನಿಟ್ಟಿನಲ್ಲಿ ಹುಂಡಿ ಮೇಲೆ ನಿಗಾವಹಿಸಲು ಸಿಸಿಟಿವಿ ಅಳವಡಿಸುವಂತೆ ಮುಖ್ಯಮಂತ್ರಿಯವರು ಸೂಚನೆ ನೀಡಿದ್ದಾರೆ. ಇದನ್ನು ಆಗಸ್ಟ್ ಕೊನೆಯ ವೇಳೆಗೆ ಪೂರ್ಣಗೊಳಿಸಬೇಕು. ಈ ಬಗ್ಗೆ ಹಗುರವಾಗಿ ಪರಿಗಣಿಸುವುದು ಬೇಡ ಎಂದರು. ರಾಜ್ಯದ ಪ್ರಸಿದ್ಧ ದೇವಸ್ಥಾನಗಳಲ್ಲಿ ಭಕ್ತರಿಗೆ ಅಗತ್ಯ ಮೂಲ ಸೌಕರ್ಯಗಳ ಕೊರತೆ ಇದೆ. ನಾನು ಭೇಟಿ ನೀಡಿ ಪರಿಶೀಲಿಸಿದ ದೇವಸ್ಥಾನಗಳಲ್ಲಿ 'ನಾವು ಯಾವ ಯುಗದಲ್ಲಿದ್ದೇವೆ' ಎಂಬ ಪ್ರಶ್ನೆ ಮೂಡುತ್ತದೆ. ಯಾರೊಬ್ಬರು ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡುತ್ತಿಲ್ಲ. ದೇವಸ್ಥಾನಗಳಲ್ಲಿ ಪಾವಿತ್ರ್ಯತೆ ಕಾಪಾಡದೆ ಹೋದರೆ ಹೇಗೆ ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.



ದೇವಸ್ಥಾನಗಳಲ್ಲಿ ಭಕ್ತರಿಗೆ ಮೂಲಸೌಕರ್ಯ ಒದಗಿಸಲು ಯಾವುದೇ ರೀತಿಯಲ್ಲೂ ಹಣದ ಕೊರತೆ ಇಲ್ಲ. ಮಾಸ್ಟರ್ ಪ್ಲಾನ್ ರೂಪಿಸಲು ಸೂಚಿಸಲಾಗಿದೆ. ಈ ಬಗ್ಗೆ ನಿರ್ಲಕ್ಷಿಸುವುದು ಬೇಡ ಎಂದು ಎಚ್ಚರಿಸಿದರು. ಸಿ ವರ್ಗದ ದೇವಸ್ಥಾನಗಳನ್ನು ಅಭಿವೃದ್ಧಿ ಹೆಸರಿನಲ್ಲಿ ಯಾವುದೇ ರೀತಿಯ ಸಂಸ್ಥೆಗಳಿಗೆ ದತ್ತು ನೀಡಬಾರದು. ಅಭಿವೃದ್ಧಿ ಹೆಸರಿನಲ್ಲಿ ದತ್ತು ಪಡೆದವರು ದೇವಸ್ಥಾನದ ಆಸ್ತಿ ನಮ್ಮದು ಎಂದು ತಕಾರಾರು ತೆಗೆಯುತ್ತಾರೆ. 'ಎ' ವರ್ಗದ ದೇವಸ್ಥಾನಗಳ ಅನುದಾನದಲ್ಲಿ ಶೇ. 10ರಷ್ಟನ್ನು 'ಸಿ' ವರ್ಗದ ದೇವಸ್ಥಾನಗಳ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಬಳಸಬೇಕು ಎಂದು ತಿಳಿಸಿದರು.

### ಮುಜರಾಯಿ ಇಲಾಖೆಗೆ ಒಪ್ಪಿಸಲು ಕ್ರಮ

ದೇವಸ್ಥಾನಗಳ ಒತ್ತುವರಿಯಾದ ಭೂಮಿಯನ್ನು ತೆರವುಗೊಳಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಈಗಾಗಲೇ ಸೂಚಿಸಲಾಗಿದೆ. ದೇವಸ್ಥಾನಗಳ ಒತ್ತುವರಿಯಾದ ಆಸ್ತಿಗಳನ್ನು ತೆರವುಗೊಳಿಸಲು ಆದ್ಯತೆ ಮೇರೆಗೆ ಸರ್ವೇ ಮಾಡಿಸಿ, ತೆರವುಗೊಳಿಸಿ ಮುಜರಾಯಿ ಇಲಾಖೆಗೆ ಒಪ್ಪಿಸಲು ಕ್ರಮ ಕೈಗೊಳ್ಳಬೇಕು. ಮೂರು ತಿಂಗಳ ಒಳಗಾಗಿ ಪೂರ್ಣಗೊಳಿಸಬೇಕು ಎಂದು ಕಂದಾಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಅವರಿಗೆ ಸ್ಪಷ್ಟ ನಿರ್ದೇಶನ ನೀಡಿದರು.

ಈ ವೇಳೆ ಶೈಕ್ಷಣಿಕ ವರ್ಷ ಆರಂಭವಾಗಿರುವ ಹಿನ್ನೆಲೆಯಲ್ಲಿ ಅಧಿಸೂಚಿತ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು ಮತ್ತು ನೌಕರರ ಮಕ್ಕಳಿಗೆ ನೀಡುವ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸುವಂತೆ ಸೂಚಿಸಿದರು.

**ಈ ದಿನದ ದರ** ಪೆಟ್ರೋಲ್: 111.68₹/L | ಡೀಸೆಲ್ : 98.77₹/L | ಬಂಗಾರ: ₹ 14,422 /Gram 24ct ₹ 13,220/Gram 22ct | ಬೆಳ್ಳಿ: ₹235.00/

## ಸುಸೂತ್ರವಾಗಿ ನಡೆದ ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ನೇಮಕಾತಿ ಪರೀಕ್ಷೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವತಿಯಿಂದ ರಾಜ್ಯಾದ್ಯಾಂತ ನಡೆಸಲಾದ ಸಿವಿಲ್ ಪೊಲೀಸ್ ಕಾನ್ಸ್ ಟೇಬಲ್ ನೇಮಕಾತಿ ಪರೀಕ್ಷೆ ಯಾವುದೇ ಅಹಿತಕರ ಘಟನೆಗಳಿಲ್ಲದೆ ಸುಸೂತ್ರವಾಗಿ ನಡೆಯಿತು. ಒಟ್ಟು 3,991 ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ನೇಮಕಾತಿಗಾಗಿ ನಡೆಯುತ್ತಿರುವ ಪರೀಕ್ಷೆಗೆ ರಾಜ್ಯಾದ್ಯಾಂತ 4,54,532 ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದು, 884 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಆಯೋಜಿಸಲಾಗಿತ್ತು. ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಬೆಳಗ್ಗೆ 10.30ರಿಂದ ಮಧ್ಯಾಹ್ನ 12ರವರೆಗೆ ಪರೀಕ್ಷೆ ನಡೆದರೆ, ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಮಧ್ಯಾಹ್ನ 4ರಿಂದ ಸಂಜೆ 5.30ರವರೆಗೆ ಪರೀಕ್ಷೆ ನಡೆಯಿತೆ.ಪರೀಕ್ಷೆಯಲ್ಲಿ ಅಕ್ರಮಗಳಿಗೆ ಕಡಿವಾಣ ಹಾಕಲು ಕೆಇಎ ವತಿಯಿಂದ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿತ್ತು. ಪರೀಕ್ಷಾ ಕೇಂದ್ರಗಳಲ್ಲಿ ವೆಬ್‌ಕಾಸ್ಟಿಂಗ್, ಸಿಸಿಟಿವಿ ಕ್ಯಾಮೆರಾ ಹಾಗೂ ಜಾಮರ್ ಗಳ ಮೂಲಕ ನಿಗಾ ವಹಿಸಲಾಗಿತ್ತು.ಬೆಂಗಳೂರು ಸೇರಿದಂತೆ ಎಂಟು ಜಿಲ್ಲೆಗಳಲ್ಲಿ ಕೆಇಎ ಕಮಾಂಡ್ ಸೆಂಟರ್ ಸ್ಥಾಪಿಸಲಾಗಿತ್ತು. ಬೆಂಗಳೂರು, ಕಲಬುರಗಿ, ಯಾದಗಿರಿ, ರಾಯಚೂರು, ಬೀದರ್, ಬಳ್ಳಾರಿ, ವಿಜಯನಗರ ಹಾಗೂ ಕೊಪ್ಪಳ ಜಿಲ್ಲೆಗಳ ಪರೀಕ್ಷಾ ಕೇಂದ್ರಗಳ ಮೇಲೆ ಬೆಂಗಳೂರಿನ ಕಮಾಂಡ್ ಸೆಂಟರ್‌ನಿಂದಲೇ ನಿಗಾ ವಹಿಸಲಾಯಿತು. ಉಳಿದ ಜಿಲ್ಲೆಗಳಲ್ಲಿ ಆಯಾ ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗಳ ನೇತೃತ್ವದಲ್ಲಿ ಪರೀಕ್ಷೆಯ ಭದ್ರತೆ ಹಾಗೂ ಮೇಲ್ವಿಚಾರಣೆ ನಡೆಸಲಾಯಿತು.

## ನ್ಯಾಕೋ ಸಂಸ್ಥೆ ಮಾಹಿತಿ ಒಪ್ಪಲ್ಲ; ರಾಜ್ಯದಲ್ಲಿ ಸೋಂಕು ನಿಯಂತ್ರಣದಲ್ಲಿದೆ: ಯು.ಟಿ. ಖಾದರ್

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಸುಮಾರು 7 ಸಾವಿರ ಕಾಲೇಜು ವಿದ್ಯಾರ್ಥಿಗಳಿಗೆ ಹೆಚ್ ಐವಿ ಸೋಂಕು ತಗುಲಿದೆ ಅನ್ನೋ ಸುದ್ದಿ ಸಾಕಷ್ಟು ಸದ್ದು ಮಾಡಿತ್ತು. ಅಲ್ಲದೇ ರಾಜ್ಯ ಸರ್ಕಾರ ಕಾಲೇಜುಗಳಲ್ಲಿ ಹೆಚ್‌ಐವಿ ಪರೀಕ್ಷೆಯನ್ನು ಕಡ್ಡಾಯಗೊಳಿಸಿದೆ ಎಂದು ಸುದ್ದಿ ಹಬ್ಬಿತ್ತು. ಇದೀಗ ವಿಚಾರಕ್ಕೆ ಸಂಬಂಧಪಟ್ಟಂತೆ ಆರೋಗ್ಯ ಸಚಿವ ಯು.ಟಿ. ಖಾದರ್ ಮಾಹಿತಿ ನೀಡಿದ್ದಾರೆ. ಕರ್ನಾಟಕದ ಹೆಚ್‌ಐವಿ ಕೇಸ್ ವಿಚಾರದಲ್ಲಿ ನ್ಯಾಕ್ ಸಂಸ್ಥೆ ನೀಡಿರುವ ಮಾಹಿತಿಯನ್ನು ನಾನು ಒಪ್ಪಲ್ಲ ಎಂದು ಖಾದರ್ ತಿಳಿಸಿದ್ದಾರೆ. 56 ಸಾವಿರ ಕೇಸ್ ಇವೆ ಎಂದು ಸಂಸ್ಥೆ ತಿಳಿಸಿದೆ. ಆ ವಿಚಾರಕ್ಕೆ ಸಂಬಂದಿಸಿದಂತೆ ಕ್ಲಾರಿಟಿ ನೀಡಿ ಎಂದು ಪತ್ರ ಬರೆಯಲು ಆರೋಗ್ಯ ಇಲಾಖೆ ಸಿದ್ದವಾಗಿದೆ.ರಾಜ್ಯದಲ್ಲಿ ಸೋಂಕಿತರ ಪ್ರಮಾಣ ನಿಯಂತ್ರಣದಲ್ಲಿದೆ. ಕಳೆದ ಮೂರು ತಿಂಗಳಲ್ಲಿ 3091 HIV ಸೋಂಕಿತರು ಪತ್ತೆಯಾಗಿದ್ದಾರೆ. 5,53,453 ಜನರ ಪೈಕಿ 3091 ಸೋಂಕಿತರು ಪತ್ತೆಯಾಗಿದ್ದಾರೆ. ಕಳೆದ ಮೂರು ತಿಂಗಳಲ್ಲಿ 2,81,742 ಗರ್ಭಿಣಿಯರನ್ನ HIV ಪರೀಕ್ಷೆಗೆ ಒಳಪಡಿಸಲಾಗಿದೆ ಎಂದು ಮಾಹಿತಿ ನೀಡಿದರು. ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ರಾಜ್ಯದಲ್ಲಿ ಜನಜಾಗೃತಿ ಮೂಡಿಸುವ ಮೂಲಕ ಭವಿಷ್ಯದಲ್ಲಿ ರೋಗಮುಕ್ತ ಸಮಾಜ ನಿರ್ಮಾಣಕ್ಕೆ ಯೋಜನೆ ರೂಪಿಸಿದೆ. ಕೇಂದ್ರದ ನ್ಯಾಕೋ ಜನಸಂಖ್ಯೆ ಆಧಾರವಾಗಿ ವಿಚಾರವನ್ನು ತಿಳಿಸಿದೆ. ಕೆಲ ಮಾಹಿತಿಗಳು ತಪ್ಪಾಗಿವೆ. ಹೆಚ್‌ಐವಿ ಪಾಸಿಟಿವ್ ಪ್ರಕರಣಗಳ ತಪ್ಪು ಮಾಹಿತಿ ಇಲ್ಲ, ಆದರೆ, HIV ಪರೀಕ್ಷೆ ಕಡ್ಡಾಯವಿಲ್ಲ ಎಂದು ಹೇಳಿದರು.


ಉದಯವಾಹಿನಿ ಚಿತ್ರ

2004 ರಿಂದ ಇಲ್ಲಿಯವರೆಗೂ 39,028 ಸೋಂಕಿತರು ರಾಜ್ಯದಲ್ಲಿದ್ದಾರೆ. 18 ರಿಂದ 35 ವರ್ಷದೊಳಗಿನವರು ಚಿಕಿತ್ಸೆ ಪಡೆಯುತ್ತಿದ್ದಾರೆ. ಎರಡು ಬಗೆಯಲ್ಲಿ ಮಾತ್ರ ಪರೀಕ್ಷೆ ಮಾಡಿಸಲಾಗುತ್ತಿದೆ. ಹೆರಿಗೆ ವೇಳೆ, ರಕ್ತ ನೀಡುವಾಗ ಮಾತ್ರ ಪರೀಕ್ಷೆ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ. -ಯು.ಟಿ. ಖಾದರ್

## ಧಾರ್ಮಿಕ ಉಡುಪಿಗೆ ಯಾವುದೇ ನಿರ್ಬಂಧವಿಲ್ಲ; ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸ್ಪಷ್ಟನೆ

• ಉದಯವಾಹಿನಿ, ಬೆಂಗಳೂರು

ನಾಗರಿಕ ಪೊಲೀಸ್ ಕಾನ್ಸ್‌ಟೇಬಲ್ ನೇಮಕಾತಿ ಪರೀಕ್ಷೆಯಲ್ಲಿ ಧಾರ್ಮಿಕ ಉಡುಪು ಅಥವಾ ಧಾರ್ಮಿಕ ಆಭರಣ ಧರಿಸಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ನಿರ್ಬಂಧ ವಿಧಿಸಲಾಗಿಲ್ಲ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸ್ಪಷ್ಟಪಡಿಸಿದ್ದಾರೆ. ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಧಾರ್ಮಿಕ ಉಡುಪು ಅಥವಾ ಧಾರ್ಮಿಕ ಆಭರಣ ಧರಿಸಿ ಪರೀಕ್ಷೆಗೆ ಹಾಜರಾಗಲು ಬಯಸುವ ಅಭ್ಯರ್ಥಿಗಳಿಗೆ ಅವಕಾಶ ನೀಡಲಾಗಿದೆ ಎಂದು ಹೇಳಿದರು.

ಆದರೆ, ಅಂತಹ ಅಭ್ಯರ್ಥಿಗಳು ಪರೀಕ್ಷೆ ಆರಂಭವಾಗುವ ಎರಡೂವರೆ ಗಂಟೆ ಮೊದಲು ಪರೀಕ್ಷಾ ಕೇಂದ್ರಕ್ಕೆ ಆಗಮಿಸಿ ಕಡ್ಡಾಯ ಭದ್ರತಾ ತಪಾಸಣೆಗೆ ಒಳಗಾಗಬೇಕು. ತಪಾಸಣೆ ಪೂರ್ಣಗೊಂಡ ಬಳಿಕವೇ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುತ್ತದೆ ಎಂದು ತಿಳಿಸಿದರು. ಪರೀಕ್ಷೆಯನ್ನು ಪಾರದರ್ಶಕ, ನ್ಯಾಯಸಮ್ಮತ ಹಾಗೂ ಸುಗಮವಾಗಿ ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಪರೀಕ್ಷಾ ಕೇಂದ್ರಗಳಲ್ಲಿ ಪಾಲಿಸಬೇಕಾದ ಉಡುಪು ನಿಯಮ, ತರಬಹುದಾದ ಹಾಗೂ ನಿಷೇಧಿತ ವಸ್ತುಗಳ ಕುರಿತು ಅಭ್ಯರ್ಥಿಗಳ ಪ್ರವೇಶ ಪತ್ರದಲ್ಲೇ ಸ್ಪಷ್ಟ ಮಾಹಿತಿ ನೀಡಲಾಗಿದೆ ಎಂದು ಹೇಳಿದರು.ಅಭ್ಯರ್ಥಿಗಳು ಪರೀಕ್ಷಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಮನವಿ ಮಾಡಿದ ಅವರು, ಮೊಬೈಲ್ ಫೋನ್, ಕೈಗಡಿಯಾರ, ಎಲೆಕ್ಟ್ರಾನಿಕ್ ಸಾಧನಗಳು, ಪುಸ್ತಕಗಳು, ಬ್ಯಾಗ್‌ಗಳು ಹಾಗೂ ಇತರೆ ನಿಷೇಧಿತ ವಸ್ತುಗಳನ್ನು ಪರೀಕ್ಷಾ ಕೇಂದ್ರಕ್ಕೆ ತರಬಾರದು ಎಂದು ಎಚ್ಚರಿಕೆ ನೀಡಿದರು.

# ಕಾವೇರಿ ಕಗ್ಗಂಟಿಗೆ ಸರ್ವಪಕ್ಷ ಒಗ್ಗಟ್ಟು

## ರಾಜ್ಯದ ಹಿತಾಸಕ್ತಿ ವಿಚಾರದಲ್ಲಿ ರಾಜಕೀಯ ಪಕ್ಷಗಳು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿದ ಇತಿಹಾಸ ಕರ್ನಾಟಕಕ್ಕಿದೆ

• ಉದಯವಾಹಿನಿ, ಬೆಂಗಳೂರು

ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ರಾಜಕೀಯಕ್ಕಿಂತ ರಾಜ್ಯದ ರೈತರು ಮತ್ತು ಜನರ ಹಿತವೇ ಸರ್ಕಾರಕ್ಕೆ ಮುಖ್ಯವಾಗಿದ್ದು, ರಾಜ್ಯದ ಹಿತಾಸಕ್ತಿ ವಿಚಾರದಲ್ಲಿ ಎಲ್ಲಾ ಪಕ್ಷಗಳು ಒಗ್ಗಟ್ಟಾಗಿ ನಿಲ್ಲಬೇಕಾದ ಅಗತ್ಯವಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭಾನುವಾರ ಹೇಳಿದ್ದಾರೆ. ಕಾವೇರಿ ನದಿ ನೀರಿನ ಹಂಚಿಕೆ ಕುರಿತಂತೆ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಭಾನುವಾರ ನಡೆದ ಸರ್ವಪಕ್ಷ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾವೇರಿ ವಿವಾದ ನಮಗೂ ಹೊಸದಲ್ಲ, ನಿಮಗೂ ಹೊಸದಲ್ಲ. ಈ ಸಮಸೆಯನ್ನು ನಾವೆಲ್ಲರೂ ವರ್ಷಗಳಿಂದ ಎದುರಿಸುತ್ತಲೇ ಬಂದಿದ್ದೇವೆ. ಇಂತಹ ಸಂದರ್ಭದಲ್ಲಿ ರಾಜಕೀಯ ಬದಿಗಿಟ್ಟು ರಾಜ್ಯದ ಹಿತವನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳಿದರು.


**1** ರೈತರ ಮುಂಗಾರು ಬೆಳೆಗಳಿಗೆ ನೀರು
**2** ಕಾವೇರಿ ವಿವಾದ ನಮಗೂ ಹೊಸದಲ್ಲ.
**3** ಜನರಿಗೆ ಕುಡಿಯುವ ನೀರು ಒದಗಿಸುವುದು

ಸಿಡಬ್ಲ್ಯುಆರ್‌ಸಿ ಹಾಗೂ ಸಿಡಬ್ಲ್ಯುಎಂಎ (ಸಭೆಗೂ ಮುನ್ನವೇ ಕೇಂದ್ರ ಸಚಿವರಾದ ಸಿ.ಆರ್. ಪಾಟೀಲ್, ಪ್ರಹ್ಲಾದ್ ಜೋಶಿ, ವಿ. ಸೋಮಣ್ಣ ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಮತ್ತು ಜಗದೀಶ್ ಶೆಟ್ಟರ್ ಅವರನ್ನು ಭೇಟಿ ಮಾಡಿ ರಾಜ್ಯದ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟಿದ್ದೆ.

ಅವರು ಕೂಡ ಕೇಂದ್ರದ ಮಟ್ಟದಲ್ಲಿ ಕರ್ನಾಟಕದ ಪರವಾಗಿ ಧ್ವನಿ ಎತ್ತಿದ್ದು, ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದು ಹೇಳಿದರು. ಇದೇ ವೇಳೆ, ದೆಹಲಿಯಲ್ಲಿ ನಡೆದ ಕರ್ನಾಟಕದ ಸಂಸದರ ಸಭೆಯಲ್ಲೂ ಪಕ್ಷಭೇದ ಮರೆತು ಎಲ್ಲರೂ ರಾಜ್ಯದ ಪರವಾಗಿ ನಿಲ್ಲುವ ಭರವಸೆ ನೀಡಿರುವುದಕ್ಕೆ ಕೃತಜ್ಞತೆ ವ್ಯಕ್ತಪಡಿಸಿದರು.

ಸಭೆಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಬಿ.ಎಸ್. ಯಡಿಯೂರಪ್ಪ, ಎಚ್.ಡಿ. ಕುಮಾರಸ್ವಾಮಿ, ಡಿ.ವಿ. ಸದಾನಂದ ಗೌಡ, ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ವಿ. ಸೋಮಣ್ಣ ಮತ್ತು ಶೋಭಾ ಕರಂದ್ಲಾಜೆ, ಉಪ ಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್, ಸಚಿವರಾದ ರಾಮಲಿಂಗಾ ರೆಡ್ಡಿ, ಕೃಷ್ಣ ಭೈರೇಗೌಡ, ಎಂ.ಬಿ. ಪಾಟೀಲ್, ಕೆ.ಜೆ. ಜಾರ್ಜ್, ಕರ್ನಾಟಕದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಸಂಸದ ಗೋವಿಂದ ಕಾರಜೋಳ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಸಚಿವ ಎಚ್.ಕೆ. ಪಾಟೀಲ್, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್, ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಸೇರಿದಂತೆ ಹಿರಿಯ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಭಾಗವಹಿಸಿದ್ದರು. ಸರ್ಕಾರ ಸರ್ವಪಕ್ಷ ಸಭೆಯಲ್ಲಿ ಕೈಗೊಳ್ಳುವ ನಿರ್ಧಾರಗಳು ಹಾಗೂ ಮುಂದಿನ ಕ್ರಮಗಳನ್ನು ಗಮನಿಸಿ ಬಿಜೆಪಿಯ ಮುಂದಿನ ನಿಲುವು ನಿರ್ಧರಿಸಲಾಗುವುದು ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ


ರಾಜ್ಯದಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಮಲೆನಾಡು ಮತ್ತು ಕೊಡಗು ಭಾಗದಿಂದ ಜಲಾಶಯಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದುಬರುತ್ತಿದೆ. ಇಂತಹ ಸಂದರ್ಭದಲ್ಲಿ ತಮಿಳುನಾಡಿಗೆ ತರಾತುರಿಯಲ್ಲಿ ನೀರು ಹರಿಸಿ ಅದನ್ನು ಸಾಧನೆ ಎಂದು ಬಿಂಬಿಸಿಕೊಳ್ಳುವುದು ಸರಿಯಲ್ಲ ಎಂದು ಟೀಕಿಸಿದರು. -ಬಸವರಾಜ ಬೊಮ್ಮಾಯಿ

ರಾಜ್ಯದ ಹಿತಾಸಕ್ತಿ ವಿಚಾರದಲ್ಲಿ ಎಲ್ಲ ರಾಜಕೀಯ ಪಕ್ಷಗಳು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿದ ಇತಿಹಾಸ ಕರ್ನಾಟಕಕ್ಕಿದೆ. ರಾಜ್ಯದ ಜನರಿಗೆ ಕುಡಿಯುವ ನೀರು ಒದಗಿಸುವುದು ಸರ್ಕಾರದ ಮೊದಲ ಆದ್ಯತೆಯಾಗಿದ್ದು, ಈ ನಿಲುವಿಗೆ ಎಲ್ಲ ಪಕ್ಷಗಳೂ ಸಹಮತ ವ್ಯಕ್ತಪಡಿಸಿವೆ ಎಂದು ತಿಳಿಸಿದರು.-ಡಿ.ಕೆ. ಶಿವಕುಮಾರ್

**ಸರ್ಕಾರದ ಆದ್ಯತೆ**

ರಾಜ್ಯದ ಜನರಿಗೆ ಕುಡಿಯುವ ನೀರು ಒದಗಿಸುವುದು, ಬೆಂಗಳೂರು, ಮೈಸೂರು, ಮಂಡ್ಯ ಸೇರಿದಂತೆ ಕಾವೇರಿ ಕೊಳ್ಳದ ಪ್ರದೇಶಗಳ ಅಗತ್ಯತೆ ಪೂರೈಸುವುದು ಹಾಗೂ ರೈತರ ಮುಂಗಾರು ಬೆಳೆಗಳಿಗೆ ನೀರು ಒದಗಿಸುವುದು ಸರ್ಕಾರದ ಮೊದಲ ಆದ್ಯತೆಯಾಗಬೇಕು.

ರೈತರ ಕಾಲುವೆಗಳಿಗೆ ರೈತರ ಮುಂಗಾರು ಬೆಳೆಗಳಿಗೆ ನೀರು ತಮಿಳುನಾಡಿಗೆ ನೀರು ಬಿಡುವುದು ಸರಿಯಾದ ಕ್ರಮವಲ್ಲ ಎಂದು ಅಭಿಪ್ರಾಯಪಟ್ಟರು.

## ತಮಿಳುನಾಡು ಮುಖ್ಯಮಂತ್ರಿಗೆ ಬಿ.ವೈ. ವಿಜಯೇಂದ್ರ ಪತ್ರ



ಕಾವೇರಿ ನೀರು ಹಂಚಿಕೆ ಹಾಗೂ ಮೇಕೆದಾಟು ಯೋಜನೆ ವಿಚಾರದಲ್ಲಿ ಸಹಕಾರ ನೀಡುವಂತೆ ಕೋರಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರಿಗೆ ಪತ್ರ ಬರೆದಿದ್ದಾರೆ. ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳು ಶತಮಾನಗಳಿಂದಲೂ ಇತಿಹಾಸ, ಸಂಸ್ಕೃತಿ, ವಾಣಿಜ್ಯ ಹಾಗೂ ಜನರ ನಡುವಿನ ಆತ್ಮೀಯ ಸಂಬಂಧಗಳ ಮೂಲಕ ಬೆಸೆದುಕೊಂಡಿವೆ ಎಂದು ಪತ್ರದಲ್ಲಿ ವಿಜಯೇಂದ್ರ ಉಲ್ಲೇಖಿಸಿದ್ದಾರೆ.ಕರ್ನಾಟಕ ಮತ್ತು ತಮಿಳುನಾಡು ಪರಸ್ಪರ ಗೌರವ ಮತ್ತು ಸದ್ಭಾವನೆಯೇ ನಮ್ಮ ಸಂಬಂಧದ ಅಡಿಪಾಯವಾಗಿ ಸಹೋದರ ರಾಜ್ಯಗಳಂತೆ ಬದುಕಿವೆ. ಕೋಟ್ಯಂತರ ತಮಿಳರು ಕರ್ನಾಟಕವನ್ನು, ವಿಶೇಷವಾಗಿ ಬೆಂಗಳೂರನ್ನು ತಮ್ಮ ಮನೆ ಮಾಡಿಕೊಂಡು ಅದರ ಗಮನಾರ್ಹ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ್ದಾರೆ.ಅದೇ ರೀತಿ, ತಮಿಳುನಾಡಿನಲ್ಲಿ ವಾಸಿಸಿ ಕೆಲಸ ಮಾಡುತ್ತಿರುವ ಕನ್ನಡಿಗರು ನಿಮ್ಮ ರಾಜ್ಯದ ಪ್ರಗತಿ ಮತ್ತು ಸಮೃದ್ಧಿಗೆ ಕೊಡುಗೆ ನೀಡಿದ್ದಾರೆ. ಈ ಪರಸ್ಪರ ಅವಲಂಬನೆಯು ರಾಜ್ಯದ ಗಡಿಗಳನ್ನು ಮೀರಿದ ಆಳವಾದ ಬಾಂಧವ್ಯಕ್ಕೆ ಸಾಕ್ಷಿಯಾಗಿದೆ ಎಂದು ವಿವರಿಸಿದ್ದಾರೆ.

## ಬರ ನಿರ್ವಹಣೆ ವೈಫಲ್ಯ-ಸರ್ಕಾರದ ವಿರುದ್ಧ ಹೋರಾಟಕ್ಕೆ ಬಿಜೆಪಿ ನಿರ್ಧಾರ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಬರ ಪರಿಸ್ಥಿತಿಯನ್ನು ನಿಭಾಯಿಸಲು ವಿಫಲವಾಗಿರುವ ರಾಜ್ಯ ಸರ್ಕಾರದ ವಿರುದ್ಧ ಹೋರಾಟ, ಮುಂದಿನ ಉಪಚುನಾವಣೆಗಳು, ಕಾವೇರಿ ನದಿ ನೀರಿನ ವಿಚಾರ, ಕೆಪಿಎಸ್‌ಸಿ ಹಗರಣ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಬಿಜೆಪಿ ಕೋರ್ ಕಮಿಟಿ ಸಭೆಯಲ್ಲಿ ಚರ್ಚೆಗಳನ್ನು ನಡೆಸಲಾಗಿದೆ. ಬೆಂಗಳೂರಿನ ಬಿಜೆಪಿ ರಾಜ್ಯ ಕಚೇರಿಯಲ್ಲಿಂದು ಬಿಜೆಪಿ ರಾಜ್ಯ ಉಸ್ತುವಾರಿ ರಾಧಾ ಮೋಹನ್‌ದಾಸ್, ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ನಡೆದ ಕೋರ್ ಕಮಿಟಿ ಸಭೆಯಲ್ಲಿ, ರಾಜ್ಯದಲ್ಲಿ ಮಳೆ ಕೊರತೆ, ಬರ ಪರಿಸ್ಥಿತಿ, ಬರ ಪರಿಹಾರದಲ್ಲಿ ರಾಜ್ಯ ಸರ್ಕಾರದ ವೈಫಲ್ಯ, ಪಿಂಚಣಿ ವಿವಾದ ಮತ್ತು ಮುಂಬರುವ ಉಪಚುನಾವಣೆಗಳ ಬಗ್ಗೆ ಚರ್ಚೆ ನಡೆಸಲಾಯಿತು. ರಾಜ್ಯದಲ್ಲಿ ಬರ ಇದ್ದರೂ ರಾಜ್ಯ ಸರ್ಕಾರ ಪರಿಹಾರ ಕಾರ್ಯಗಳನ್ನು ಕೈಗೊಳ್ಳದೆ ಇರುವುದರ ವಿರುದ್ಧ ಮುಂಬರುವ ವಿಧಾನಸಭಾ ಅಧಿವೇಶನದಲ್ಲಿ ಪ್ರಸ್ತಾಪಿಸಿ, ಸದನದಲ್ಲಿ ಯಾವ ರೀತಿ ಹೋರಾಟ ನಡೆಸಬೇಕು ಎಂಬ ಬಗ್ಗೆಯೂ ಕೋರ್ ಕಮಿಟಿ ಸಭೆಯಲ್ಲಿ ಚರ್ಚಿಸಲಾಯಿತು.ಮುಂಬರುವ ಹಿರಿಯೂರು ಕ್ಷೇತ್ರದ ಉಪಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಯನ್ನು ನಿಲ್ಲಿಸುವ ಸಂಬಂಧ ಚರ್ಚೆಗಳು ನಡೆದವು. ಹಾಗಯೇ ಆಕ್ಟೋಬರ್‌ನಲ್ಲಿ ನಡೆಸುವ ವಿಧಾನಪರಿಷತ್ ಚುನಾವಣೆ ಸಂಬಂಧವೂ ಚರ್ಚೆಗಳು ನಡೆದವು. ಕೆಪಿಎಸ್‌ಸಿ ಹಗರಣದ ಬಗ್ಗೆಯೂ ವಿಧಾನಮಂಡಲದ ಅಧಿವೇಶನದಲ್ಲಿ ಚರ್ಚೆ ಮಾಡುವ ಬಗ್ಗೆಯೂ ಇಂದಿನ ಕೋರ್ ಕಮಿಟಿ ಸಭೆಯಲ್ಲಿ ಚರ್ಚಿಸಲಾಗಿದೆ.ತಾಂತ್ರಿಕ ಕಾರಣದಿಂದ ಪಿಂಚಣಿ ವಂಚಿತರಾದರವರ ಹೋರಾಟ ನಡೆಸಲುಸಭೆಯಲ್ಲಿ ತೀರ್ಮಾನಗಳಾದವು ಎಂದು ಹೇಳಲಾಗಿದೆ. ಹಾಗೆಯೇ ಕಾವೇರಿ ವಿಚಾರದಲ್ಲಿ ರಾಜ್ಯದ ಹಿತಾಸಕ್ತಿಯನ್ನು ಕಾರಪಾಡಲು ರಾಜ್ಯ ಸ ರ್ಕಾದ ಮೇಲೆ ಯಾವ ರೀತಿ ಒತ್ತಡ ಹೇರಬೇಕು, ಅಗ ತ್ಯವಿದ್ದೆ ಕಾವೇರಿ ವಿಚಾರದಲ್ಲಿ ಹೋರಾಟ ನಡೆಸುವ ಬಗ್ಗೆಯೂ ಇಂದಿನ ಕೋರ್ ಕ ಮಿಟಿ ಸಭೆಯಲ್ಲಿ ಚರ್ಚೆಗಳು ನಡೆದವು ಎನ್ನಲಾಗಿದೆ.

## ಕೂಡಲಸಂಗಮ ಮಂಡಳಿ ಸಭೆಯಲ್ಲಿ ಅಧಿಕಾರಿಗಳ ಬೆವರಿಳಿಸಿದ ಪರಮೇಶ್ವರ್..!

• ಉದಯವಾಹಿನಿ, ಬೆಂಗಳೂರು

ಕೂಡಲಸಂಗಮ ಅಭಿವೃದ್ಧಿ ಮಂಡಳಿಯ ಕಳೆದ 35 ವರ್ಷಗಳ ಲೆಕ್ಕಪರಿಶೋಧನೆ (ಆಡಿಟ್) ನಡೆಸದಿರುವ ವಿಚಾರಕ್ಕೆ ಸಂಬಂಧಿಸದಂತೆ ಅಧಿಕಾರಿಗಳನ್ನು ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವ ಡಾ. ಜಿ. ಪರಮೇಶ್ವರ್ ಅವರು ತೀವ್ರ ತರಾಟೆಗೆ ತೆಗೆದುಕೊಂಡರು.

ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಭಿವೃದ್ಧಿ ಯೋಜನೆ ರೂಪಿಸಿದ ಬಳಿಕ ಮೂಲ ಅಂದಾಜು ಮೊತ್ತವನ್ನು ಬದಲಾಯಿಸಬೇಕಾದರೆ ಸೂಕ್ತ ಕಾರಣಗಳೊಂದಿಗೆ ಮಂಡಳಿಯ ಅನುಮೋದನೆ ಪಡೆಯಬೇಕು. ಬಳಿಕ ಸರ್ಕಾರ ಅಂತಿಮ ನಿರ್ಧಾರ ಕೈಗೊಳ್ಳಲಿದೆ ಎಂದು ಸ್ಪಷ್ಟಪಡಿಸಿದರು.ಚಿಕ್ಕಸಂಗಮದಲ್ಲಿ ಕಲ್ಯಾಣ ಮಂಟಪ ಹಾಗೂ ವೇದ ಪಾಠಶಾಲೆ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ರೂ.24.98 ಕೋಟಿ ಅನುದಾನ ಕೋರಲಾಗಿದೆ. ಈ ಸಂಬಂಧ ಶೀಘ್ರದಲ್ಲೇ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಕೂಡಲಸಂಗಮ ಅಭಿವೃದ್ಧಿ ಮಂಡಳಿ 2005ರಲ್ಲಿ ಸ್ಥಾಪನೆಯಾದರೂ, 2023ರವರೆಗೆ ಯಾವುದೇ ಮಹತ್ವದ ಅಭಿವೃದ್ಧಿ ಕಾಮಗಾರಿಗಳು ಆರಂಭವಾಗಿರಲಿಲ್ಲ. ನಂತರ ಸಚಿವ ಸಂಪುಟ ರೂ.744 ಕೋಟಿ ಮೌಲ್ಯದ ವಿವಿಧ ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದು, ಇದುವರೆಗೆ ರೂ.480 ಕೋಟಿ ವೆಚ್ಚ ಮಾಡಲಾಗಿದೆ. ಬಾಕಿ ಇರುವ 17 ಸ್ಮಾರಕಗಳ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಮುಖ್ಯಮಂತ್ರಿಯವರೊಂದಿಗೆ ಬಸವಕಲ್ಯಾಣಕ್ಕೆ ಭೇಟಿ ನೀಡಿದ್ದ ವೇಳೆ ಅಧಿಕಾರಿಗಳು ಡಿಸೆಂಬರ್ ಅಂತ್ಯದೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸುವ ಭರವಸೆ ನೀಡಿದ್ದರು. ಆದರೆ, ಈಗ ಮತ್ತಷ್ಟು ಕಾಲಾವಕಾಶ ಕೇಳುತ್ತಿರುವುದು ಒಪ್ಪಲಾಗದು. ಬಾಕಿ ಇರುವ ಕಾಮಗಾರಿಗಳನ್ನು ತ್ವರಿತವಾಗಿ ಮುಗಿಸಬೇಕು ಎಂದು ಬೀದರ್ ಜಿಲ್ಲಾಧಿಕಾರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಐತಿಹಾಸಿಕ ಬನವಾಸಿ ಅಭಿವೃದ್ಧಿಗಾಗಿ 50 ಕೋಟಿ ವೆಚ್ಚದ ಸಮಗ್ರ ಯೋಜನೆ ಸಿದ್ಧಪಡಿಸಲಾಗಿದೆ. ಮಂಡಳಿಯ ಅನುಮೋದನೆ ಪಡೆದ ಬಳಿಕ ಅದನ್ನು ಮುಖ್ಯಮಂತ್ರಿಗಳ ಮುಂದಿಡಲಾಗುವುದು ಎಂದು ಹೇಳಿದರು.- ಪರಮೇಶ್ವರ್


ಉದಯವಾಹಿನಿ ಚಿತ್ರ

## ಸಚಿವರ ಪಟ್ಟಿ ತರಲಿರುವ ವೇಣುಗೋಪಾಲ್, ಸುರ್ಜೆವಾಲ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸಚಿವ ಸಂಪುಟ ವಿಸ್ತರಣೆ ನಾಳೆ ನಡೆಯಲಿದ್ದು, ನೂತನ ಸಚಿವರ ಪ್ರಮಾಣ ವಚನಕ್ಕೆ ರಾಜ್ಯಭವನದಲ್ಲಿ ಸಿದ್ಧತೆಗಳು ನಡೆದಿರುವಾಗಲೇ, ಸಚಿವರ ಪಟ್ಟಿಯನ್ನು ಹೊತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲ ಬೆಂಗಳೂರಿಗೆ ಆಗಮಿಸುವರು.

ರಾಜ್ಯ ಸಚಿವ ವಿಸ್ತರಣೆ ಬಗ್ಗೆ ಮೂರು ದಿನಗಳ ಹಿಂದೆ ದೆಹಲಿಯಲ್ಲಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ ಅವರ ನಿವಾಸದಲ್ಲಿ ರಾಹುಲ್‌ಗಾಂಧಿ ಉಪಸ್ಥಿತಿಯಲ್ಲಿ ಚರ್ಚೆಗಳು ನಡೆದಿದ್ದವು. ಈ ಸಭೆಯಲ್ಲಿ ಭಾಗಿಯಾಗಿದ್ದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಇವರುಗಳ ಜತೆ ರಾಹುಲ್‌ಗಾಂಧಿ, ಮಲ್ಲಿಕಾರ್ಜುನಖರ್ಗೆ ಇವರುಗಳು ಚರ್ಚೆ ನಡೆಸಿ, ಭಾನುವಾರ ನೂತನ ಸಚಿವರ ಪಟ್ಟಿಯನ್ನು ಕಳುಹಿಸುತ್ತೇವೆ. ಸೋಮವಾರ ಸಚಿವರ ಪದಗ್ರಹಣಕ್ಕೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಿ ಎಂದು ಹೇಳಿದ್ದರು. ಇದಾದ ಬಳಿಕ ಸಂಪುಟ ವಿಸ್ತರಣೆ ಬಗ್ಗೆ ಚರ್ಚಿಸಲು ದೆಹಲಿಗೆ ತೆರಳಿದ್ದ ರಾಜ್ಯ ನಾಯಕರು ಬೆಂಗಳೂರಿಗೆ ವಾಪಸ್ಸಾಗಿದ್ದು, ನಾಳೆ ಸಂಪುಟ ವಿಸ್ತರಣೆಗೆ ಮುಹೂರ್ತ ನಿಗದಿಯಾಗಿದ್ದು, ನೂತನ ಸಚಿವರುಗಳ ಪಟ್ಟಿಯನ್ನು ಇಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ವೇಣುಗೋಪಾಲ್ ರವರು ತಾವೇ ಖುದ್ದ ತರಲಿದ್ದಾರೆ ಎಂದು ಹೇಳಲಾಗಿದೆ. ಈ ಇಬ್ಬರು ನಾಯಕರು ಬೆಂಗಳೂರಿಗೆ ಬರಲಿದ್ದು, ಹೈಕಮಾಂಡ್ ಸಿದ್ಧಪಡಿಸಿರುವ ಸಚಿವರ ಪಟ್ಟಿಯನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರಿಗೆ ನೀಡುವರು. ನಂತರ ಮುಖ್ಯಮಂತ್ರಿಗಳು ಅದನ್ನು ರಾಜ್ಯಪಾಲರಿಗೆ ಕಳುಹಿಸಿ ನಾಳೆ ನೂತನ ಸಚಿವರ ಪದಗ್ರಹಣಕ್ಕೆ ಅವಕಾಶ ನೀಡುವರು ಎಂದು ಹೇಳಲಾಗಿದೆ.

## ಪುಸ್ತಕ ಪ್ರಕಾಶನದ 9 ಕೃತಿಗಳನ್ನು ಬಿಡುಗಡೆಗೊಳಿಸಿ ನಟ ಅನಂತನಾಗ್ ಆಶಯ

• ಉದಯವಾಹಿನಿ, ಬೆಂಗಳೂರು

ವಿಶ್ವವಾಣಿ ಪುಸ್ತಕ ಪ್ರಕಾಶನದ ವತಿಯಿಂದ 9 ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮ ನಡೆಯಿತು. ವಿಶ್ವವಾಣಿ ಪುಸ್ತಕ, ವಾಗ್ದೇವಿ ವಿದ್ಯಾ ವರ್ಧಕ ಟ್ರಸ್ಟ್ ವಾಗ್ದೇವಿ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಬೆಂಗಳೂರಿನ ಎಫ್ ಕೆಸಿಸಿಐ ಸಭಾಂಗಣದಲ್ಲಿ ಸಮಾರಂಭ ನೆರವೇರಿತು. ಪದ್ಮಭೂಷಣ, ಹಿರಿಯ ನಟ ಅನಂತನಾಗ್ ಮುಖ್ಯ ಪುಸ್ತಕಗಳನ್ನು ಬಿಡುಗಡೆಗೊಳಿಸಿ ಪುಸ್ತಕ ಇಂದಿನ ತಲೆಮಾರಿನಲ್ಲಿ ಓದುವ ಹವ್ಯಾಸ ಬೆಳೆಯಲಿ. ರಾಷ್ಟ್ರವಾದಿ ಚಿಂತಕ, ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಅತಿಥಿಗಳಾಗಿ ಭಾಗವಹಿಸಿದರು. ವಿಶ್ವವಾಣಿಮತ್ತು ಪ್ರವಾಸಿ ಪ್ರಪಂಚ ಪತ್ರಿಕೆ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಕಾರ್ಯಕ್ರಮದ ಅಧ್ಯಕ್ಷತೆವಹಿಸಿದರು. ಖ್ಯಾತ ವಿದ್ವಾಂಸ ವಿಮರ್ಶಕ ಗ.ನಾ. ಭಟ್ಟ ಬಿಡುಗಡೆಯಾದ 9 ಕೃತಿಗಳನ್ನು ಪರಿಚಯಿಸಿದರು. ರೂಪಾ ಗುರುರಾಜ, ಮೋಹನ್ ವಿಶ್ವ ಶಿಶಿರ ಹೆಗಡೆ, ವಿಶ್ವವಾಣಿಸಮೂಹ ಸಂಸ್ಥೆಯ ಸಿಇಒ ಚಿದಾನಂದ ಕಡಲಾಸ್ಕರ ಹಾಗೂ ವಿಶ್ವವಾಣಿ ಪುಸ್ತಕ ಸಂಸ್ಥೆಯ ಮುಖ್ಯಸ್ಥರಾದ ಸುಷ್ಮಾ ಭಟ್ ಉಪಸ್ಥಿತರಿದ್ದರು.

## 3000 ರೊಬೊ ನೆರವಿನ ಶಸ್ತ್ರಚಿಕಿತ್ಸೆಗಳ ಪೂರ್ಣಗೊಳಿಸಿದ ಹೆಗ್ಗಳಿಕೆಗೆ!

• ಉದಯವಾಹಿನಿ, ಬೆಂಗಳೂರು

ಭಾರತದಲ್ಲಿ ರೋಬೋಟಿಕ್ ನೆರವಿನ ಶಸ್ತ್ರಚಿಕಿತ್ಸೆಯ ಬೆಳವಣಿಗೆಯಲ್ಲಿ ಐತಿಹಾಸಿಕ ಮೈಲಿಗಲ್ಲನ್ನು ಸಾಧಿಸಿರುವ ಬನ್ನೇರುಘಟ್ಟ ರಸ್ತೆಯ ಫೋರ್ಟಿಸ್ ಆಸ್ಪತ್ರೆಯು, ಅತ್ಯಾಧುನಿಕ ಡಾ ವಿನ್ಸಿ ಎಕ್ಸ್‌ಐ ಶಸ್ತ್ರಚಿಕಿತ್ಸಾ ವ್ಯವಸ್ಥೆ ಬಳಸಿ ದೇಶದಲ್ಲೇ ಅತ್ಯಂತ ವೇಗವಾಗಿ 3000 ರೊಬೊ ನೆರವಿನ ಶಸ್ತ್ರಚಿಕಿತ್ಸೆಗಳನ್ನು ಪೂರ್ಣಗೊಳಿಸಿದ ಆಸ್ಪತ್ರೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಮೈಲಿಗಲ್ಲು, ಆಸ್ಪತ್ರೆಯ ಅತ್ಯುತ್ಕೃಷ್ಟ ವೈದ್ಯಕೀಯ ಸೇವೆ, ಶಸ್ತ್ರಚಿಕಿತ್ಸಾ ಕ್ಷೇತ್ರದಲ್ಲಿನ ನಾವೀನ್ಯತೆ ಹಾಗೂ ಹಲವು ವಿಭಾಗಗಳಲ್ಲಿ ರೋಗಿಗಳಿಗೆ ಉತ್ತಮ ಚಿಕಿತ್ಸಾ ಫಲಿತಾಂಶಗಳನ್ನು ನೀಡುವಲ್ಲಿ ಸಂಸ್ಥೆ ಹೊಂದಿರುವ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಈ ವಿಶೇಷ ಮೈಲಿಗಲ್ಲಿನ ಸಂಭ್ರಮಾಚರಣೆ ಯನ್ನು ಬೆಂಗಳೂರಿನ ದಿ ಲಲಿತ್ ಅಶೋಕ್ ಹೋಟೆಲ್ ಆಯೋಜಿಸಲಾಗಿತ್ತು. ಕರ್ನಾಟಕ ಸರ್ಕಾರದ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮದ ಘನತೆ ಹೆಚ್ಚಿಸಿದರು.

## ಒಂದೆಡೆ ಕರ್ತವ್ಯ, ಇನ್ನೊಂದೆಡೆ ಮಾತೃ ವಾತ್ಸಲ್ಯ: ಕಾನ್ಸ್‌ಟೇಬಲ್ ಪರೀಕ್ಷೆಗೆ 8 ತಿಂಗಳ ಮಗುವಿನೊಂದಿಗೆ ಬಂದ ತಾಯಿಗೆ ಪೊಲೀಸರ ಆಸರೆ

• ಉದಯವಾಹಿನಿ, ಬೆಂಗಳೂರು

ಕಾನ್ಸ್‌ಟೇಬಲ್ ಪರೀಕ್ಷೆ ಬರೆಯಲು ತಮ್ಮ ಎಂಟು ತಿಂಗಳ ಮಗುವಿನೊಂದಿಗೆ ಬಂದ ಅಭ್ಯರ್ಥಿಗೆ ಚೆನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಯ ಸಿಬ್ಬಂದಿ ನೆರವಾಗುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ನಗರದ ಕೃಷ್ಣಾ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಪೊಲೀಸ್ ಸಿಬ್ಬಂದಿಯ ಮಾನವೀಯ ಕಾರ್ಯದಿಂದಾಗಿ ತಾಯಿ ನಿಶ್ಚಿಂತೆಯಿಂದ ಕಾನ್ಸ್ಟೇಬಲ್ ಪರೀಕ್ಷೆ ಬರೆದ ಘಟನೆ ನಡೆದಿದೆ. ಇಂದು ರಾಜ್ಯಾದ್ಯಂತ ಪೊಲೀಸ್ ಕಾನ್ಸ್ಟೇಬಲ್ ನೇಮಕಾತಿ ಪರೀಕ್ಷೆ ನಡೆಯಿತು. ಪರೀಕ್ಷೆ ಬರೆಯಲು ಕೃಷ್ಣಾ ಕಾಲೇಜಿಗೆ ಅಭ್ಯರ್ಥಿಯೊಬ್ಬರು ತಮ್ಮ 8 ತಿಂಗಳ ಮಗುವಿನೊಂದಿಗೆ ಆಗಮಿಸಿದ್ದರು. ಆದರೆ, ಪರೀಕ್ಷಾ ಕೊಠಡಿಗೆ ಹೋಗುವ ಕ್ಷಣದಲ್ಲಿ ಮಗು ಜೋರಾಗಿ ಅಳಲು ಪ್ರಾರಂಭಿಸಿದೆ. ಸಮಾಧಾನಪಡಿಸಲು ಎಷ್ಟೇ ಪ್ರಯತ್ನಿಸಿದರೂ ಅಳು ನಿಲ್ಲಿಸಿಲ್ಲ. ಪರೀಕ್ಷೆ ಬರೆಯಬೇಕೋ ಅಥವಾ ಮಗುವನ್ನು ನೋಡಿಕೊಳ್ಳಬೇಕೋ ಎಂದು ಸಂಕಟಪಡುತ್ತಿದ್ದ ತಾಯಿಯನ್ನು ಸ್ಥಳದಲ್ಲಿ ಬಂದೋಬಸ್ತ್ ಕರ್ತವ್ಯದಲ್ಲಿದ್ದ ಚೆನ್ನಮ್ಮನಕೆರೆ ಅಚ್ಚುಕಟ್ಟು ಠಾಣೆಯ ಮಹಿಳಾ ಸಿಬ್ಬಂದಿ ಗಮನಿಸಿದ್ದಾರೆ. ತಾಯಿಯ ಬಳಿ ತೆರಳಿ ನೀವು ನಿಶ್ಚಿಂತೆಯಿಂದ ಪರೀಕ್ಷೆ ಬರೆಯಿರಿ, ಮಗುವನ್ನು ನಾವು ಸುರಕ್ಷಿತವಾಗಿ ನೋಡಿಕೊಳ್ಳುತ್ತೇವೆ ಎಂದು ಧೈರ್ಯ ತುಂಬಿದ್ದಾರೆ. ಬಳಿಕ ತಾಯಿ ಪರೀಕ್ಷಾ ಕೊಠಡಿಯ ಒಳಗಡೆ ತೆರಳಿದ ಬಳಿಕ, ಪೊಲೀಸ್ ಸಿಬ್ಬಂದಿ ಮಗುವನ್ನು ಆಟವಾಡಿಸಿ, ಕಾಳಜಿಯಿಂದ ನೋಡಿಕೊಂಡಿದ್ದಾರೆ. ಈ ಬಗ್ಗೆ ಚೆನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಯ ಪಿಎಸ್‌ಐ ಮಾಹಿತಿ ಹಂಚಿಕೊಂಡಿದ್ದಾರೆ. ಪರೀಕ್ಷೆ ಮುಗಿಸಿ ಆಚೆಗೆ ಬಂದ ತಾಯಿ ಪೊಲೀಸ್ ಸಿಬ್ಬಂದಿಯ ಕಾಳಜಿಗೆ ಧನ್ಯವಾದ ಅರ್ಪಿಸಿದ್ದಾರೆ. ಕರ್ತವ್ಯ ಪ್ರಜ್ಞೆಯ ಜೊತೆಗೆ ಪೊಲೀಸ್ ಸಿಬ್ಬಂದಿಯ ಮಾನವೀಯ ಕಾರ್ಯಕ್ಕೆ ಸಾರ್ವಜನಿಕರಿಂದ ಪ್ರಶಂಸೆ ವ್ಯಕ್ತವಾಗುತ್ತಿದೆ.


ಉದಯವಾಹಿನಿ ಚಿತ್ರ

# ಸಂಕಷ್ಟದಲ್ಲಿದ್ದ ರಾಜ್ಯ ಸರ್ಕಾರಕ್ಕೆ ವರದಾನವಾದ ವರುಣ; ಕಾವೇರಿ ವಿವಾದದಿಂದ ತಾತ್ಕಾಲಿಕ ಮುಕ್ತಿ..!


## ಮಳೆಯಿಂದ ಕೆಆರ್‌ಎಸ್ ಮತ್ತು ಕಬಿನಿ ಜಲಾಶಯಗಳಿಗೆ ನೀರಿನ ಒಳಹರಿವು ಗಮನಾರ್ಹವಾಗಿ ಏರಿಕೆಯಾಗಿದೆ

• ಉದಯವಾಹಿನಿ, ಬೆಂಗಳೂರು

ಕಾವೇರಿ ಜಲಾನಯನ ಪ್ರದೇಶಗಳಲ್ಲಿನ ಭಾರಿ ಮಳೆಯಿಂದಾಗಿ ಕಬಿನಿ ಜಲಾಶಯ ಭರ್ತಿಯಾಗಿದ್ದು, ತಮಿಳುನಾಡಿಗೆ ತಾನಾಗಿಯೇ ಹೆಚ್ಚಿನ ನೀರು ಹರಿಯುತ್ತಿರುವುದು ಕರ್ನಾಟಕ ಸರ್ಕಾರಕ್ಕೆ ನಿರಾಳತೆ ತಂದಿದೆ.

ಕಳೆದ 24 ಗಂಟೆಗಳಲ್ಲಿ ಕೃಷ್ಣರಾಜ ಸಾಗರ (ಕೆಆರ್‌ಎಸ್) ಹಾಗೂ ಕಬಿನಿ ಜಲಾಶಯಗಳಿಗೆ ಒಳಹರಿವು ಹೆಚ್ಚಾಗಿದ್ದು, ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ) ಮತ್ತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯುಎಂಎ) ನೀಡಿದ್ದ ನಿರ್ದೇಶನಗಳನ್ನು ಪಾಲಿಸಲು ಸರ್ಕಾರಕ್ಕೆ ಅನುಕೂಲವಾಗಿದೆ. ಜುಲೈ 28ರಂದು ಸಿಡಬ್ಲ್ಯುಆರ್‌ಸಿ, ಬಿಳಿಗುಂಡ್ಲು ಗಡಿ ಮಾಪನ ಕೇಂದ್ರದಲ್ಲಿ 15 ದಿನಗಳ ಕಾಲ ಪ್ರತಿದಿನ 3,500 ಕ್ಯೂಸೆಕ್ ನೀರು ಹರಿಯುವಂತೆ ನೋಡಿಕೊಳ್ಳುವಂತೆ ಕರ್ನಾಟಕಕ್ಕೆ ಸೂಚಿಸಿತ್ತು. ಇದರಿಂದ ಒಟ್ಟು ಸುಮಾರು 4 ಟಿಎಂಸಿ ಅಡಿ ನೀರನ್ನು ಹರಿಸಬೇಕಾದ ಪರಿಸ್ಥಿತಿ ಎದುರಾಗಿತ್ತು.ಈ ಆದೇಶವನ್ನು 15 ದಿನಗಳ ಕಾಲ ಮುಂದೂಡಲು ಹಾಗೂ ಜಲ ವೈಜ್ಞಾನಿಕ ಪರಿಸ್ಥಿತಿಯನ್ನು ಮರುಪರಿಶೀಲಿಸಲು ರಾಜ್ಯ ಸರ್ಕಾರ ಸಿಡಬ್ಲ್ಯುಎಂಎಗೆ ಮನವಿ ಮಾಡಿತ್ತು. ಆದರೆ, ಜುಲೈ 30ರಂದು ನಡೆದ ಸಭೆಯಲ್ಲಿ ಪ್ರಾಧಿಕಾರವು ಸಿಡಬ್ಲ್ಯುಆರ್‌ಸಿ ಆದೇಶವನ್ನೇ ಎತ್ತಿಹಿಡಿದಿತ್ತು.

**1** ಕಬಿನಿಗೆ ಹೆಚ್ಚಿದ ಒಳಹರಿವು
**2** ಅಣೆಕಟ್ಟಿನ ಬಳಿ ಪ್ರತಿಭಟನೆ
**3** ಸುಮಾರು 10,000 ಕ್ಯೂಸೆಕ್


ಉದಯವಾಹಿನಿ ಚಿತ್ರ

ಕಬಿನಿ ಜಲಾಶಯದಿಂದ ಸುಮಾರು 10,000 ಕ್ಯೂಸೆಕ್ ನೀರನ್ನು ಹೊರಬಿಡಲಾಗಿದ್ದು, ನೀರಿನ ಮಟ್ಟ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಪ್ರವಾಹ ಮುನ್ನೆಚ್ಚರಿಕೆ ಕೂಡ ನೀಡಲಾಗಿದೆ. ಮುಂದಿನ ಕೆಲ ದಿನಗಳಲ್ಲಿ 3ರಿಂದ 4 ಟಿಎಂಸಿ ಅಡಿ ನೀರನ್ನು ಹೊರಹರಿಸುವ ಸಾಧ್ಯತೆ ಇದೆ. ಇದೇ ವೇಳೆ ಬಿಜೆಪಿ ನಾಯಕರು ಮೈಸೂರಿನ ಕೆಆರ್‌ಎಸ್ ಅಣೆಕಟ್ಟಿನ ಬಳಿ ಪ್ರತಿಭಟನೆ ನಡೆಸಿ, ರಾಜ್ಯದ ಹಿತಾಸಕ್ತಿಯನ್ನು ಸರ್ಕಾರ ಕಾಪಾಡುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದ್ದರು.

ಈ ಬಿಕ್ಕಟ್ಟಿನ ನಡುವೆಯೇ ಮೇಕೆದಾಟು ಸಮತೋಲನ ಜಲಾಶಯ ಯೋಜನೆ ಕುರಿತು ಕೇಂದ್ರ ಸರ್ಕಾರ ನೀಡಿದ ಸ್ಪಷ್ಟನೆ ರಾಜ್ಯಕ್ಕೆ ದೀರ್ಘಾವಧಿಯ ನೆಮ್ಮದಿಯಾಗಿದೆ. ತಮಿಳುನಾಡು, ಕೇರಳ ಅಥವಾ ಪುದುಚೇರಿಯ ಒಪ್ಪಿಗೆ ಇಲ್ಲದೇ ಕೂಡ ಮೇಕೆದಾಟು ಯೋಜನೆಯನ್ನು ಕರ್ನಾಟಕ ಮುಂದುವರಿಸಬಹುದು ಎಂದು ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವ ರಾಜ್‌ಭೂಷಣ್ ಚೌಧರಿ ಇತ್ತೀಚೆಗೆ ಸ್ಪಷ್ಟಪಡಿಸಿದ್ದಾರೆ.67 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯದ ಈ ಯೋಜನೆಯಿಂದ ಬೆಂಗಳೂರಿಗೆ ಕುಡಿಯುವ ನೀರು ಪೂರೈಕೆ ಹಾಗೂ 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಗುರಿ ಹೊಂದಲಾಗಿದೆ. ಕೇಂದ್ರದ ಅಗತ್ಯ ಅನುಮತಿಗಳನ್ನು ಪಡೆದ ಬಳಿಕ ಯೋಜನೆಯನ್ನು ಮುಂದುವರಿಸಲು ರಾಜ್ಯಕ್ಕೆ ದಾರಿ ಸುಗಮವಾಗಿದೆ. ಕಾವೇರಿ ವಿವಾದದ ಕುರಿತು ರಾಜಕೀಯ ಒಮ್ಮತ ರೂಪಿಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸರ್ವಪಕ್ಷ ಸಭೆ ಕರೆದಿದ್ದಾರೆ. ಈ ಸಭೆಯಲ್ಲಿ ರಾಜ್ಯದ ವಾಸ್ತವ ಪರಿಸ್ಥಿತಿಯನ್ನು ವಿವರಿಸಿ, ಮುಂದಿನ ಕಾನೂನು ಹಾಗೂ ಆಡಳಿತಾತ್ಮಕ ಕ್ರಮಗಳ ಕುರಿತು ಸಲಹೆ ಪಡೆಯುವ ನಿರೀಕ್ಷೆಯಿದೆ.

ಇದೀಗ ಸುರಿದ ಮಳೆ ಸರ್ಕಾರಕ್ಕೆ ತಾತ್ಕಾಲಿಕ ನೆಮ್ಮದಿ ತಂದಿದ್ದರೂ, ಕಾವೇರಿ ನೀರು ಹಂಚಿಕೆ ವಿವಾದದ ಶಾಶ್ವತ ಪರಿಹಾರ ಹಾಗೂ ಮೇಕೆದಾಟು ಯೋಜನೆಯ ಅನುಷ್ಠಾನವೇ ರಾಜ್ಯದ ಮುಂದಿನ ದೊಡ್ಡ ಸವಾಲಾಗಿ ಉಳಿದಿದೆ.

ಕೇರಳದ ವಯನಾಡು, ಕರ್ನಾಟಕದ ಕೊಡಗು ಸೇರಿದಂತೆ ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಸುರಿದ ಭಾರೀ ಮಳೆಯಿಂದ ಕೆಆರ್‌ಎಸ್ ಮತ್ತು ಕಬಿನಿ ಜಲಾಶಯಗಳಿಗೆ ನೀರಿನ ಒಳಹರಿವು ಗಮನಾರ್ಹವಾಗಿ ಏರಿಕೆಯಾಗಿದೆ. ಮುಂದಿನ ಎರಡು-ಮೂರು ದಿನಗಳ ಕಾಲವೂ ಇದೇ ಪರಿಸ್ಥಿತಿ ಮುಂದುವರಿಯುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.- ನಿಯಂತ್ರಣ ಸಮಿತಿ

**ನೀರು ಬಿಡಬಾರದು**

ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿದಿದ್ದರಿಂದ ಸಿಡಬ್ಲ್ಯುಆರ್‌ಸಿ ಹಾಗೂ ಸಿಡಬ್ಲ್ಯುಎಂಎ ನಿರ್ದೇಶನ ಪಾಲಿಸುವುದು ಸರ್ಕಾರಕ್ಕೆ ಕಷ್ಟಕರವಾಗಿತ್ತು. ರೈತರು ಹಾಗೂ ಕನ್ನಡಪರ ಸಂಘಟನೆಗಳು ತಮಿಳುನಾಡಿಗೆ ನೀರು ಬಿಡಬಾರದು ಎಂದು ಒತ್ತಾಯಿಸಿ, ಆಗಸ್ಟ್ 13ರಂದು ಕರ್ನಾಟಕ ಬಂದ್ಗೂ ಕರೆ ನೀಡಿವೆ.

ಅಂತರಾಳದಿಂದ..
EDITORIAL


# ಮತ್ತೆ ಕಾವೇರಿದ ನೀರಿನ ರಾಜಕೀಯ



ಕಾವೇರಿ ಮತ್ತೆ ಕಾವೇರಿದೆ. ಅಂತರ್‌ರಾಜ್ಯ ನೀರಿನ ರಾಜಕೀಯಕ್ಕೆ ಮತ್ತೆ ಬೆಂಕಿ ಬಿದ್ದಿದೆ. ತಮಿಳು ನಾಡಿಗೆ ಮುಂದಿನ ಎರಡು ವಾರಗಳ ಕಾಲ ನಿತ್ಯ 3,500 ಕ್ಯೂಸೆಕ್ ನೀರು ಹರಿಸಬೇಕು ಎಂದು ಕಾವೇರಿ ನೀರು ನಿಯಂತ್ರಣ ಸಮಿತಿಯು ನೀಡಿರುವ ಸೂಚನೆಯ ವಿರುದ್ಧ ರಾಜ್ಯಾದ್ಯಂತ ಆಕ್ರೋಶ ವ್ಯಕ್ತವಾಗಿರುವ ಬೆನ್ನಿಗೇ, ಈ ಸೂಚನೆಯನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ಎತ್ತಿ ಹಿಡಿದಿದೆ. ಇನ್ನೂ ಹದಿನೈದು ದಿನಗಳಲ್ಲಿ ಒಟ್ಟು 4.5 ಟಿಎಂಸಿ ನೀರನ್ನು ತಮಿಳು ನಾಡಿಗೆ ಹರಿಸಲೇಬೇಕು ಎಂದು ಪ್ರಾಧಿಕಾರ ಸೂಚನೆಯನ್ನು ನೀಡಿದೆ. ಸಮಿತಿಯ ಆದೇಶದ ವಿರುದ್ಧ ಮೇಲ್ಮನವಿಗೆ ರಾಜ್ಯ ಸರಕಾರ ತೀರ್ಮಾನಿಸಿದ ಬೆನ್ನಿಗೇ ಈ ತೀರ್ಪು ಹೊರಬಿದ್ದಿರುವುದು ಆಘಾತಕಾರಿಯಾಗಿದೆ. ಯಾವ ಕಾರಣಕ್ಕೂ ನೀರು ಬಿಡಬಾರದು ಎಂದು ವಿರೋಧ ಪಕ್ಷದ ಮುಖಂಡರು ಆಗ್ರಹಿಸುತ್ತಿದ್ದಾರೆ. ಇದೇ ಸಂದರ್ಭದಲ್ಲಿ 'ಜಲಾನಯನ ಪ್ರದೇಶದ ಪರಿಸ್ಥಿತಿಯನ್ನು ತಮಿಳು ನಾಡು ಮುಖ್ಯಮಂತ್ರಿ ವಿಜಯ್ ಅವರಿಗೆ ಮನವರಿಕೆ ಮಾಡಲಾಗುವುದು. ಆ ಬಳಿಕ ಅವರ ತೀರ್ಮಾನ ಏನು ಎನ್ನುವುದನ್ನು ಗಮನಿಸಿ ಮುಂದಿನ ಹೆಜ್ಜೆ ಇಡುತ್ತೇವೆ' ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಆದರೆ ಈ ಮನವರಿಕೆ ತಮಿಳುನಾಡಿಗೆ ಅರ್ಥವಾಗುತ್ತದೆ ಎನ್ನಲಾಗುವುದಿಲ್ಲ. ಯಾಕೆಂದರೆ, ತಮಿಳುನಾಡಿನ ರೈತರೂ ಕಾವೇರಿ ನೀರಿಗಾಗಿ ಅಲ್ಲಿನ ಮುಖ್ಯಮಂತ್ರಿಯ ಮೇಲೆ ತೀವ್ರ ಒತ್ತಡವನ್ನು ಹಾಕುತ್ತಿದ್ದಾರೆ. ಈ ಹಿಂದೆ ಕಾವೇರಿ ನೀರನ್ನು ಹರಿಸಬೇಕು ಎಂಬ ತಮಿಳು ನಾಡಿನ ಮನವಿಯನ್ನು ಇದೇ ಸಮಿತಿ ಎರಡು ಬಾರಿ ತಿರಸ್ಕರಿಸಿತ್ತು. ಆ ಸಂದರ್ಭದಲ್ಲಿ ಅಲ್ಲಿನ ಈ ಬಾರಿ ಹವಾಮಾನ ವೈಪರೀತ್ಯ, ಅನಿಯಮಿತ ಮುಂಗಾರು, ಅಂತರ್ಜಲ ಮಟ್ಟ ಕುಸಿತದಿಂದ ರಾಜ್ಯದ ರೈತರ ಸ್ಥಿತಿ ಇನ್ನಷ್ಟು ದಯನೀಯವಾಗಿದೆ. ಕಾವೇರಿ ಜಲಾನಯದ ಪ್ರದೇಶದಲ್ಲಿ ನಿರೀಕ್ಷಿತ ಮಳೆಯಾಗಿಲ್ಲ ಮಾತ್ರವಲ್ಲ, ಮಳೆಯಾಗುವ ಸಾಧ್ಯತೆಗಳೂ ಕಡಿಮೆ ಎಂದು ಹವಾಮಾನ ಇಲಾಖೆ ಹೇಳುತ್ತಿದೆ. ಪರಿಸ್ಥಿತಿ ಹೀಗೇ ಮುಂದುವರಿದರೆ, ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಿಗೆ ಕುಡಿಯುವ ನೀರಿನ ಭೀಕರ ಸಮಸ್ಯೆ ಎದುರಾಗಲಿದೆ. ಒಂದೆಡೆ ಕುಡಿಯುವ ನೀರಿಗೆ ತತ್ವಾರ, ಇನ್ನೊಂದೆಡೆ ರಾಜ್ಯದ ರೈತರಿಗೆ ಬೇಕಾದ ಅಗತ್ಯ ನೀರಿನ ಕೊರತೆ. ಇವುಗಳ ನಡುವೆ ತಮಿಳು ನಾಡಿಗೆ 15 ದಿನಗಳ ಕಾಲ ಪ್ರತೀ ದಿನ 3,500 ಕ್ಯೂಸೆಕ್ ನೀರು ಬಿಡಬೇಕು ಎಂದು ಒತ್ತಾಯಿಸಿದರೆ ಅದನ್ನು ಈಡೇರಿಸುವುದು ಅಸಾಧ್ಯ. ಇದೇ ಸಂದರ್ಭದಲ್ಲಿ ತಮಿಳುನಾಡಿನಲ್ಲಿ ಈಗಾಗಲೇ ಶೇ. 40ರಷ್ಟು ಕುಡಿಯುವ ನೀರಿನ ಸಂಗ್ರಹವಿದ್ದು, ಅಲ್ಲಿ ಮಳೆಯಾಗುವ ಸಾಧ್ಯತೆಯೂ ಇದೆ. ಇವೆಲ್ಲವನ್ನು ಪರಿಗಣಿಸಿ ಪ್ರಾಧಿಕಾರ ತನ್ನ ಆದೇಶವನ್ನು ನೀಡುವುದು ಅತ್ಯಗತ್ಯವಾಗಿತ್ತು. ಪ್ರಾಧಿಕಾ ತಮಿಳುನಾಡಿನ ಬಗ್ಗೆ ಮೃದು ನೀತಿಯನ್ನು ಹೊಂದಿದೆ ಎನ್ನುವ ಆರೋಪ ಕೇಳಿ ಬರುತ್ತಿದೆ. ರಾಜ್ಯ ಸರಕಾರದ ಮೇಲೆ ಎರಡು ಪ್ರಮುಖ ಆರೋಪಗಳಿವೆ. ಮುಖ್ಯವಾಗಿ, ಜಲಾಶಯಗಳಿಂದ ಕದ್ದು ಮುಚ್ಚಿ ನೆರೆರಾಜ್ಯಕ್ಕೆ ನೀರು ಬಿಡಲಾಗುತ್ತಿದೆ ಎಂದು ಕೆಲವು ರೈತ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದೇ ಸಂದರ್ಭದಲ್ಲಿ ರಾಜ್ಯದ ಪರವಾಗಿ ಸಮರ್ಥ ವಾದವನ್ನು ಮಂಡಿಸಲು ರಾಜ್ಯ ಸರಕಾರ ವಿಫಲವಾಗಿದೆ ಎಂದೂ ವಿರೋಧ ಪಕ್ಷದ ನಾಯಕರು ಆರೋಪಿಸುತ್ತಿದ್ದಾರೆ. ಹಾಗೆಯೇ ತಮಿಳು ನಾಡಿನ ಮುಖ್ಯಮಂತ್ರಿಗೆ ಆಹ್ವಾನ ನೀಡಿರುವ ರಾಜ್ಯ ಸರಕಾರದ ಕ್ರಮವನ್ನೂ ವಿರೋಧ ಪಕ್ಷದ ನಾಯಕರು ಖಂಡಿಸಿದ್ದಾರೆ. ಮೇಕೆದಾಟು ಯೋಜನೆಗೆ ಅಡ್ಡಗಾಲು ಹಾಕುತ್ತಿರುವ ತಮಿಳು ನಾಡು ಮುಖ್ಯಮಂತ್ರಿಯನ್ನು ರಾಜ್ಯಕ್ಕೆ ಆಹ್ವಾನಿಸುವ ಅಗತ್ಯವಾದರೂ ಏನು ಎಂದು ಅವರು ಕೇಳುತ್ತಿದ್ದಾರೆ. ತಮಿಳುನಾಡಿಗೆ ಗುಟ್ಟಾಗಿ ಸರಕಾರ ನೀರು ಬಿಡುತ್ತಿರುವುದು ನಿಜವೇ ಆಗಿದ್ದರೆ, ಪ್ರಾಧಿಕಾರ ಪ್ರತ್ಯೇಕ ಆದೇಶವನ್ನು ನೀಡುವ ಅವಶ್ಯಕತೆ ಬೀಳುತ್ತಿರಲಿಲ್ಲ. ಇದೇ ಸಂದರ್ಭದಲ್ಲಿ ಈ ಹಿಂದೆ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಕಾವೇರಿ ನೀರು ಬಿಡುವುದು ಯಾಕೆ ಅನಿವಾರ್ಯವಾಗಿತ್ತು ಎನ್ನುವುದನ್ನು ಈ ಸಂದರ್ಭದಲ್ಲಿ ಆತ್ಮಾವಲೋಕನಕ್ಕೆ ಬಳಸಿಕೊಳ್ಳಬೇಕು. ಪ್ರಾಧಿಕಾರದ ನಿರ್ಧಾರದಲ್ಲಿ ಕೇಂದ್ರ ಸರಕಾರದ ಪಾತ್ರವೂ ಎದ್ದು ಕಾಣುತ್ತದೆ.

> ರಾಜಕೀಯ ನಾಯಕರೂ ಸ್ಥಳೀಯರಿಂದ ಸಾಕಷ್ಟು ಆಕ್ರೋಶಗಳನ್ನು ಎದುರಿಸಿದ್ದರು. ಇದೀಗ ಪ್ರಾಧಿಕಾರವೂ ನೀರು ಹಂಚುವಿಕೆಯನ್ನು ಎತ್ತಿ ಹಿಡಿದಿರುವುದರಿಂದ ಕರ್ನಾಟಕದ ರೈತರ ಸಂಕಟವನ್ನು ತಮಿಳು ನಾಡು ಮುಖ್ಯಮಂತ್ರಿ ಗಣನೆಗೆ ತೆಗೆದುಕೊಳ್ಳುತ್ತಾರೆ ಎಂದು ನಿರೀಕ್ಷಿಸುವಂತಿಲ್ಲ. ಈ ಕಾವೇರಿದ ಸಂದರ್ಭವನ್ನು ವಿರೋಧ ಪಕ್ಷದ ನಾಯಕರೂ ತಮಗೆ ಪೂರಕವಾಗಿ ಬಳಸಿಕೊಳ್ಳಲು ಮುಂದಾಗಿದ್ದಾರೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಇಕ್ಕಟ್ಟಿನಲ್ಲಿ ಸಿಲುಕಿಸಲು ಯತ್ನಿಸುತ್ತಿದ್ದಾರೆ. ಈ ಬಾರಿ ಮಳೆ ಭಾರೀ ಇಳಿಕೆ ಕಂಡಿದ್ದು ರಾಜ್ಯಾದ್ಯಂತ ಬರಪರಿಸ್ಥಿತಿ ನಿರ್ಮಾಣವಾಗಿದೆ. 'ಸರಿಯಾಗಿ ಮಳೆಯಿಲ್ಲ ಎಂದಾದರೆ ಬೆಳೆ ಬೆಳೆಯಬೇಡಿ. ಬೆಳೆದು ಬಳಿಕ ಪರಿಹಾರ ಕೇಳಬೇಡಿ' ಎನ್ನುವ ಹೇಳಿಕೆ ನೀಡುವ ಮಟ್ಟಕ್ಕೆ ರಾಜ್ಯ ಸರಕಾರ ಬಂದು ನಿಂತಿದೆ.

# ರಾಮಾಯಣ



ತತ್ವಸ್ವರೂಪವನ್ನು ಉಪದೇಶಿಸಿ ಮರುತಾತ್ಮಜನನ್ನು ಶ್ರೀರಾಮನು ಬ್ರಹ್ಮಪದವಿಯಲ್ಲಿ ಕುಳ್ಳಿರಿಸಿದ್ದನು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ದಿವ್ಯೌಷಧವನ್ನು ಕೊಡಲು ವಿಪ್ರಾಧಮನ ಭವರೋಗವು ವಾಸಿಯಾಗಿ ಚಿದಾತ್ಮವೆನ್ನಿಸುವ ಸುಖಾನುಭವವು ಉಂಟಾಗಲು ಭೇದಜ್ಞಾನ ಎಂಬ ಕಾಳ್ಗಿಚ್ಚು ತಣ್ಣಗಾಗಿ, ಅವನು ದೃಢಭಕ್ತಿಯಿಂದ ಶ್ರೀರಾಮನನ್ನು ಸೇವಿಸುತ್ತ ಜೀವಾತ್ಮ ಸಾಮರಸ್ಯದಿಂದ ಅಲುಗಾಡದ ದೀಪದ ಕುಡಿಯಂತೆ ನಿಶ್ಚಲನಾಗಿದ್ದ ಎಂದು ಶ್ರೀರಾಮನು ಕತೆಯನ್ನು ಮುಗಿಸಿದ. ಹಿಂದುಮುಂದುಗಳಿಲ್ಲದ ಚಂದನ ಬೆಳಕಿನಂತೆ ನಿರಾಲಂಬವಾದ ಅಂತಃಕರಣದಿಂದ ಕೂಡಿದ ಮರುತ್ಸುತನು ಅಲೆಗಳಿಲ್ಲದ ನದಿಯಲ್ಲಿ ಮುಳುಗಿದ ಕಳಶದ ಹಾಗೆ, ಎಲ್ಲಾ ಜೀವಿಗಳೂ ತಾನೇ ಎಂಬ ಸರ್ವಾತ್ಮಭಾವದಿಂದ ರಘುವರನನ್ನು ಸೇವಿಸುತ್ತಿದ್ದ ತ್ತಿದ್ದ. ಈ ರೀತಿಯಲ್ಲಿ ಅಖಂಡಭಾವವನ್ನು ಉಪದೇಶಿಸಿದ ರಾಮಪುರದರಸನು ಹನುಮಂತನನ್ನು ಉಪಾಧಿರಹಿತ ನಿತ್ಯಾನಂದ ಸಾಮ್ರಾಜ್ಯರೂಪನೆಂದೆನಿಸಿದ. ತತ್ವಸ್ವರೂಪವನ್ನು ಉಪದೇಶಿಸಿ ಮರುತಾತ್ಮಜನನ್ನು ಶ್ರೀರಾಮನು ಬ್ರಹ್ಮಪದವಿಯಲ್ಲಿ ಕುಳ್ಳಿರಿಸಿದ್ದನು. ಅಗಜೆಯೇ, ಭವರೋಗವಿರುವವರೆಗೂ ದೇಹದಲ್ಲಿ ವಾಸನೆಗಳು ಅಂಟಿರುತ್ತವೆ, ಆ ರೋಗ ವಾಸಿಯಾದ ಕ್ಷಣವೇ ಆತ್ಮಜ್ಞಾನವುಂಟಾಗುತ್ತದೆ, ಆಗ ಹೃದ್ಗ್ರಂಥಿ ಹರಿದು ಹೋಗುತ್ತದೆ; ಆನಂತರ ವ್ಯಕ್ತಿಯು ಮಂಗಳಕರವಾದ ಹಾದಿಯನ್ನು ಹಿಡಿದು ನಿಜವಾದ ತತ್ವಾನುಭವದ ತಿಳಿವಿನಿಂದ. ಆತ್ಮಾರಾಮನಾಗಿ ಅವಧೂತನಾಗುತ್ತಾನೆ. ಮನುಷ್ಯರಲ್ಲಿ ಆತ್ಮಜ್ಞಾನವನ್ನು ತಿಳಿಯಲು ಇಚ್ಛಿಸುವವನು ಸಾವಿರದಲ್ಲಿ ಒಬ್ಬ ಅವನು ಹಿಂದೆ ಹೇಳಿದ ಸಾಧನಗಳ ಬಗ್ಗೆ ಒಲವನ್ನು ಮೂಡಿಸಿಕೊಳ್ಳಲು ಸಿದ್ಧನಾಗಿ ನಿತ್ಯಮುಕ್ತತೆಯಿಂದ ಪ್ರಾರಬ್ಧವು ಇರುವವರೆಗೂ ಅವಧೂತಮಾನಸದಿಂದ ಕೂಡಿ, ಪ್ರಪಂಚವನ್ನು ಇಂದ್ರಜಾಲದಂತೆ ಎಂದು ಭಾವಿಸಿ ಮಾನಾವಮಾನ ಸ್ತುತಿನಿಂದೆಗಳನ್ನು ಸಮಾನವಾಗಿ ತಿಳಿದು ಮನುಷ್ಯನಂತೆಯೇ ಇರುತ್ತಾನೆ. ಸುಜ್ಞಾನಬೋಧೆಯಿಂದ ಉನ್ಮತ್ತ ಬಾಲಪಿಶಾಚಿಯಂತೆ ಕಾಣಿಸುತ್ತಾನೆ ಅವನು ಭ್ರಮೆಗೆ ಅಂಟಿಕೊಳ್ಳದೆ. ರಘುವರನ ಪಾದಕಮಲಗಳನ್ನು ಮೊರೆವೊಕ್ಕು, ಘೋರ ಕರ್ಮಗಳನ್ನು ಕಳೆದುಕೊಂಡು ಮುಕ್ತಿಗೆ ಅರ್ಹನಾಗುತ್ತಾನೆ, ಇದು ಸತ್ಯ. ಕಲಿಯುಗದ ಪಾಪಿಗಳ ನಡುವೆ ಶ್ರೀರಾಮಪದಚಿಂತಕನಾದ ವೀತರಾಗನು ಸುಲಭನಾಗಿ ಸಿಕ್ಕಿಕೊಳ್ಳುತ್ತಾನೆ, ಪಾತಕಗಳೆಲ್ಲ ಹೋಗಿ, ನಿರ್ವಾಣಲಕ್ಷ್ಮಿಯು ಒಲಿಯುವ ಉಪಾಯವೆಂದರೆ ಶ್ರುತಿಶಾಸ್ತ್ರಸಮ್ಮತವಾದ ರಾಮನಾಮ ಮಾತ್ರ ಸತ್ಯಧರ್ಮಜ್ಞಾನಗಳಿಲ್ಲದೆ ಈತಿಬಾಧೆಗಳು ಉಂಟಾಗಿ ಸುಖವು ದೊರಕುವುದಿಲ್ಲ ಸೀತಾಪತಿಯ ದಿವ್ಯನಾಮಕೀರ್ತನೆಯಿಂದ ಪಾಪಗಳು ಓಡಿಹೋಗಿ ಸುಜ್ಞಾನಕರವಾದ ಅತಿಶಯವುಂಟಾಗುತ್ತದೆ; ಆದ್ದರಿಂದ ಕಲಿಯುಗದಲ್ಲಿ ನಾಮಸ್ಮರಣೆಯ ಹೊರತು ಬೇರೆ ಉಪಾಯವಲ್ಲ ಎಂದು ಪವನತನಯನು ಆಲೋಚಿಸಿದ.

ಕೃತಯುಗದಲ್ಲಿ ಧರ್ಮವು ನಾಲ್ಕು ಕಾಲುಗಳ ಮೇಲೆ ನಿಂತಿರುತ್ತದೆ, ಆಗ ಎಲ್ಲರೂ ಹರಿಭಕ್ತಿ ಶಾಂತಿ ವೈರಾಗ್ಯ ತಪಸ್ಸು ದಾನ ಮುಂತಾದುವುಗಳಲ್ಲಿ ನಿಷ್ಠೆಯನ್ನು ಹೊಂದಿರುತ್ತಾರೆ ತ್ರೇತಾಯುಗದಲ್ಲಿ ನಾಲ್ಕರಲ್ಲಿ ಒಂದು ಪಾದಕ್ಕೆ ಚ್ಯುತಿಯುಂಟಾಗಿ ಮದ ಹುಸಿ ಹಿಂಸೆ ಅತಿಲೋಭಗಳು ಹುಟ್ಟಿಕೊಳ್ಳುತ್ತವೆ, ಆ ಯುಗದಲ್ಲಿ ವಿಷ್ಣುಭಕ್ತಿಯನ್ನು ಬಿಟ್ಟು ಜನರು ಯಾಗವೇ ಮೊದಲಾದ ಕರ್ಮಗಳ ಬೆನ್ನುಹತ್ತುತ್ತಾರೆ. ಮೂರನೆಯ ಯುಗದಲ್ಲಿ ಧರ್ಮವು ಅರ್ಥ ಮಾತ್ರ ನಿಂತಿರುತ್ತದೆ, ಆಗ ಜನರು ಸದಾಚಾರವಿಲ್ಲದ ವಂಚಕರಾಗಿ, ಶಾಸ್ತ್ರಹಿತವನ್ನು ಅರಿಯದೆ ಕೀರ್ತಿಕಾಮುಕರಾಗಿ ಶೌರ್ಯಕ್ಕೆ ಅನುಗುಣವಾದ ಚಿತ್ತವೃತ್ತಿಯನ್ನು ಹೊಂದುತ್ತಾರೆ ಕಲಿಯುಗದಲ್ಲಿ ಧರ್ಮವು ಒಂಟಿ ಕಾಲಲ್ಲಿ ನಿಂತು ಶೌಚ ಅಚಾರ. ದಾನ ದಯೆ ದಾಕ್ಷಿಣ್ಯ ನಾರಾಯಣಪಾದಸೇವೆಗಳನ್ನು ಅನುಸರಿಸದೆ ಮತಾಚಾರ ವಶರಾಗುತ್ತಾರೆ. ಕೃತಯುಗವು ಸತ್ವಪ್ರಧಾನವಾಗಿ ಬ್ರಾಹ್ಮಣಜಾತಿ ಅತ್ಯಂತ ಶ್ರೇಷ್ಠವಾಗಿರುತ್ತದೆ ಎರಡನೆಯ ಯುಗದಲ್ಲಿ ರಾಜನಿಗೆ ಮುಖ್ಯವಾದಸ ಸ್ಥಾನ; ದ್ವಾಪರದಲ್ಲಿ ವೈಶ್ಯರಿಗೆ ಹೆಚ್ಚು ಮಾನ್ಯತೆ, ಕಲಿಯುಗದಲ್ಲಿ ಶೂದ್ರ ಮತ್ತಿತರ ಮಿಶ್ರ ಜಾತಿಗಳಿಗೆ ಪ್ರಾಧಾನ್ಯ ಈ ಯುಗದಲ್ಲಿ ಹುಟ್ಟಿನಿಂದ ವಿಪ್ರರಾದರೂ ವಿಪ್ರಧರ್ಮಗಳನ್ನು ಅನುಸರಿಸುವುದಿಲ್ಲ. ಜಾತಿಮಾತ್ರೋಪಜೀವನವಲ್ಲದೆ ಯಾಗಯೋಗಾದಿಗಳ ಅನುಸರಣೆಯಿಲ್ಲದೆ, ವಿಪ್ರರು ದುರ್ದಾನ, ಕೆಟ್ಟದ್ದನ್ನು ಸ್ವೀಕರಿಸುವುದು, ದುಷ್ಟಸೇವನೆ, ಮಾತಾಪಿತೃದ್ರೋಹ, ಗುರುಧಿಕ್ಕರಣೆ, ಪ್ರೀತಿರಾಹಿತ್ಯ, ದಯಾರಹಿತತೆ, ಲೋಭ, ದಂಭ, ವಂಚನೆಗಳಿಂದ ಕೂಡಿರುತ್ತಾರೆ.

ಅಂತರಂಗದಲ್ಲಿ ಮಿತಿಯಿಲ್ಲದಷ್ಟು ಪಾತಕಗಳನ್ನು ಬಚ್ಚಿಟ್ಟುಕೊಂಡು ಎಲ್ಲರಿಗೆ ತತ್ತಜೋಧೆ ಮಾಡುತ್ತದೆ. ಪರದ ಬಗ್ಗೆ ಕನಸಿನಲ್ಲಾದರೂ ಲೇಶವೂ ಚಿಂತಿಸದೆ, ಆಹಾರಮೈಥುನಗಳ ಭ್ರಾಂತಿಯಿಂದ ಕೂಡಿ ಬೇರೆಯವರ ಹಣವನ್ನು ಹೊಡೆಯುವುದರಲ್ಲಿ ನಿರತರಾಗಿ, ಕಾಂತಾಚಿಂತೆಗಳಿಂದ ಕೂಡಿ ಅಧ್ಯಯನವನ್ನು ಬಿಟ್ಟು ಬ್ರಾಹಣರು ದುಷ್ಟ ಕೆಲಸಗಳಲ್ಲಿ ನಿರತರಾಗಿರುತ್ತಾರೆ. ಅವರು ವೇದಗಳನ್ನು ಓದುವುದಿಲ್ಲ, ಓದಿದರೂ ಅದನ್ನು ಮಾರಿಕೊಳ್ಳುತ್ತಾರೆ.

ಮುಂದುವರೆಯುವುದು



ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ .ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

41

# ಸ್ಕ್ರೋಲ್ ಅಲ್ಲ, ಗುರಿ!

**ವಿಜ್ಞಾನ ಏನು ಹೇಳುತ್ತದೆ ಅತಿಯಾದ ಸ್ಕ್ರೀನ್ ಬಳಕೆ ಮೆದುಳಿನ ಗಮನವನ್ನು ಚದುರಿಸುತ್ತದೆ. ಪ್ರತಿ ನೋಟಿಫಿಕೇಷನ್ ಓದಿನ ಹರಿವನ್ನು ಕತ್ತರಿಸುತ್ತದೆ. ರಾತ್ರಿಯ ಸ್ಕ್ರೋಲ್ ನಿದ್ರೆಯನ್ನು ಹಾಳು ಮಾಡಿ, ನೆನಪಿನ ಶಕ್ತಿಯನ್ನು ದುರ್ಬಲಗೊಳಿಸುತ್ತದೆ. ಇದರ ನೇರ ಹೊಡೆತ ಅಂಕ, ಕ್ರೀಡೆ ಮತ್ತು ಆತ್ಮವಿಶ್ವಾಸದ ಮೇಲೆ ಬೀಳುತ್ತದೆ. ಡಿಜಿಟಲ್ ಚಟವು ಮೌನವಾಗಿ ನಮ್ಮ ಸಾಮರ್ಥ್ಯವನ್ನು ಕೊಳ್ಳೆ ಹೊಡೆಯುತ್ತಿದೆ.**



ಇಂದಿನ ವಿದ್ಯಾರ್ಥಿಯ ಜೇಬಿನಲ್ಲಿರುವ ಸ್ಮಾರ್ಟ್‌ಫೋನ್ ಒಂದೇ ಸಮಯದಲ್ಲಿ ಗುರು ಮತ್ತು ಶತ್ರು. ಸರಿಯಾಗಿ ಬಳಸಿದರೆ ಅದು ಜಗತ್ತಿನ ಜ್ಞಾನವನ್ನೇ ತರುವ ಕೀಲಿ. ತಪ್ಪಾಗಿ ಬಳಸಿದರೆ ಸಮಯ ಮತ್ತು ಏಕಾಗ್ರತೆಯನ್ನು ಕದಿಯುವ ಕಳ್ಳ. ಆದ್ದರಿಂದಲೇ ಈಗ ಡಿಜಿಟಲ್ ಶಿಸ್ತು ಯಶಸ್ಸಿನ ಹೊಸ ಮಂತ್ರವಾಗಿದೆ. ತಂತ್ರಜ್ಞಾನವನ್ನು ಆಳುವವನೇ ಭವಿಷ್ಯದ ನಾಯಕ. ಆದರೆ ಪರಿಹಾರ ಸರಳವಾಗಿದೆ. ಫೋನ್ ಅನ್ನು ಅಧ್ಯಯನ, ಸಂಶೋಧನೆ ಮತ್ತು ಕಲಿಕೆಗೆ ಮಾತ್ರ ಬಳಸಬೇಕು. ಓದುವಾಗ ಅದನ್ನು ಬೇರೆ ಕೋಣೆಯಲ್ಲಿ ಇಡಬೇಕು. ಫೋನ್ ತೆಗೆಯುವ ಮೊದಲು ಏಕೆ? ಎಂದು ಒಮ್ಮೆ ಯೋಚಿಸಬೇಕು. ಮಲಗುವ ಒಂದು ಗಂಟೆ ಮೊದಲು ಸ್ಕ್ರೀನ್ ಆಫ್ ಮಾಡಬೇಕು.

ಈ ಮೂರು ನಿಯಮಗಳೇ ನಿಮ್ಮ ಏಕಾಗ್ರತೆಯ ರಕ್ಷಾಕವಚ. ಡಿಜಿಟಲ್ ಶಿಸ್ತು ಎಂದರೆ ತಂತ್ರಜ್ಞಾನವನ್ನು ತ್ಯಜಿಸುವುದಲ್ಲ. ಅದನ್ನು ನಿಮ್ಮ ಗುಲಾಮನನ್ನಾಗಿ ಮಾಡಿಕೊಳ್ಳುವುದು. ಇದರಿಂದ ಆತ್ಮನಿಯಂತ್ರಣ, ಜವಾಬ್ದಾರಿ ಮತ್ತು ಸ್ಪಷ್ಟ ಚಿಂತನೆ ಬೆಳೆಯುತ್ತದೆ. ನೆನಪಿಡಿ, ಯಶಸ್ವಿಗಳ ಕೈಯಲ್ಲಿ ಫೋನ್ ಇರುತ್ತದೆ. ಫೋನಿನ ಕೈಯಲ್ಲಿ ಯಶಸ್ವಿಗಳು ಇರುವುದಿಲ್ಲ.

# ಈ ದೈನಂದಿನ ಅಭ್ಯಾಸಗಳಿಂದ ಮಾನಸಿಕ ಒತ್ತಡ ಹೆಚ್ಚಳ: ಈ ಸಮಸ್ಯೆಯಿಂದ ಹೊರಗೆ ಬರುವುದು ಹೇಗೆ?

ಸಾಮಾನ್ಯವಾಗಿ ಕೆಲಸದಲ್ಲಿ ದೊಡ್ಡ ದುರಂತ, ಅಸಹನೀಯ ಒತ್ತಡ ಎದುರಿಸಿದಾಗ ಒತ್ತಡ ಹಾಗೂ ಆತಂಕವು ನಮ್ಮನ್ನು ಆವರಿಸುತ್ತದೆ. ಆಗಾಗ್ಗೆ ಮಾಡುವಂತಹ ಸಣ್ಣ ಅಭ್ಯಾಸ, ತೋರಿಕೆಯಲ್ಲಿನ ಸಾಮಾನ್ಯ ಅಭ್ಯಾಸಗಳು ನಮಗೆ ತಿಳಿಯದೆ, ಕ್ರಮೇಣ ನಮ್ಮ ಮನಸ್ಸಿನಲ್ಲಿ ಆತಂಕದ ಬೀಜಗಳನ್ನು ಬಿತ್ತುತ್ತವೆ.

ಎದ್ದ ತಕ್ಷಣ ಫೋನ್ ಅನ್ನು ವೀಕ್ಷಿಸುವುದು, ರಾತ್ರಿಯಲ್ಲಿ ಹಾಸಿಗೆಯಲ್ಲಿ ಮಲಗಿರುವಾಗ ಅನಗತ್ಯ ಸುದ್ದಿಗಳನ್ನು ಓದುವುದು, ಕೆಲಸದ ಒತ್ತಡದಿಂದಾಗಿ ಒಂದು ಕಪ್ ಆದ ನಂತರ ಮತ್ತೊಂದು ಕಪ್ ಕಾಫಿ ಕುಡಿಯುವುದು. ಈ ಕ್ರಿಯೆಗಳಲ್ಲಿ ಬಹುಶಃ ಏನು ತಪ್ಪಾಗಿರಬಹುದು ಎಂಬುದು ನಮಗೆ ತಿಳಿಯುವುದಿಲ್ಲ. ನಿಖರವಾಗಿ ಈ ಸರಳ ಅಭ್ಯಾಸಗಳು ನಮ್ಮ ದೈನಂದಿನ ಮನಸ್ಸಿನ ಶಾಂತಿ ನಿಧಾನವಾಗಿ ಕಡಿಮೆಯಾಗುತ್ತದೆ.

ಮಾನಸಿಕ ಒತ್ತಡವನ್ನು ಉಂಟುಮಾಡುವ ಈ ದೈನಂದಿನ ಅಭ್ಯಾಸಗಳು ಯಾವುವು? ಇವುಗಳ ಕುರಿತು ವಿವರವಾಗಿ ತಿಳಿಯೋಣ. ಇವುಗಳಿಂದ ನಾವು ಹೇಗೆ ಮುಕ್ತರಾಗಬಹುದು ಎಂಬುದನ್ನು ಅರಿತುಕೊಳ್ಳೋಣ. ನಮ್ಮ ದೇಹಕ್ಕೆ ಆರೋಗ್ಯಕರ ಆಹಾರವನ್ನು ಆಯ್ಕೆಮಾಡುವಾಗ ನಾವು ಎಷ್ಟು ಕಾಳಜಿ ವಹಿಸುತ್ತೇವೆ ಎಂಬುದರ ಕುರಿತು ಯೋಚಿಸಬೇಕಾಗುತ್ತದೆ, ಉತ್ಪನ್ನವನ್ನು ಖರೀದಿಸುವ ಮೊದಲು ಅದರ ಗುಣಮಟ್ಟವನ್ನು ಪರಿಶೀಲಿಸುವ ಕುರಿತು ಜಾಗರೂಕರಾಗಿದ್ದೇವೆ. ಪ್ರತಿದಿನ ನಮ್ಮ ಮನಸ್ಸಿಗೆ ಯಾವ ರೀತಿಯ ಮಾಹಿತಿ ನೀಡುತ್ತೇವೆ ಎಂಬುದರ ಕುರಿತು ವಿರಳವಾಗಿ ಗಮನ ಹರಿಸುತ್ತೇವೆ. ಪ್ರಸ್ತುತ ಯುಗದಲ್ಲಿ ಜಾಗತಿಕ ಘಟನೆಗಳ ಬಗ್ಗೆ ಮಾಹಿತಿ ಪಡೆಯುವುದು ಖಂಡಿತವಾಗಿಯೂ ಮುಖ್ಯವಾಗಿದೆ.

ಎದ್ದ ಕ್ಷಣದಿಂದ ಮತ್ತೆ ರಾತ್ರಿ ನಿದ್ರೆಗೆ ಜಾರುವವರೆಗೆ ಮೊಬೈಲ್ ಫೋನ್‌ಗಳಲ್ಲಿ ನಾವು ನಿರಂತರವಾಗಿ ಆಘಾತಕಾರಿ ಸುದ್ದಿ, ಹಿಂಸಾತ್ಮಕ ವಿಷಯವನ್ನು ವೀಕ್ಷಿಸಿದರೆ ಏನಾಗುತ್ತದೆ ನಮ್ಮ ಮೆದುಳು ನಿರಂತರ ಭಯ ಮತ್ತು ಅತಿ-ಎಚ್ಚರಿಕೆಯ ಸ್ಥಿತಿಯಲ್ಲಿರುತ್ತದೆ. ನಿರಂತರ ಹರಿವು ನಮ್ಮ ಮನಸ್ಸನ್ನು ಒಂದೇ ಒಂದು ಕ್ಷಣ ವಿಶ್ರಾಂತಿ ಇಲ್ಲದೆ ಬಿಡುತ್ತದೆ. ಇದರ ಪರಿಣಾಮವಾಗಿ ನಮಗೆ ಅರಿವಿಲ್ಲದೆಯೇ ಆತಂಕದ ಭಾವನೆ ಆವರಿಸುತ್ತದೆ. ಸುದ್ದಿಗಳನ್ನು ವೀಕ್ಷಿಸಲು ಅಥವಾ ಸೋಶಿಯಲ್ ಮೀಡಿಯಾ ಬಳಸಲು ಮಾತ್ರ ನಿರ್ದಿಷ್ಟ ಸಮಯ ಮೀಸಲಿಡುವುದು ಉತ್ತಮ ಪರಿಹಾರವಾಗಿದೆ.

ಸೋಶಿಯಲ್ ಮೀಡಿಯಾವು ಇಂದು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಇತರರ ವಿದೇಶ ಪ್ರವಾಸಗಳು, ಅವರು ಖರೀದಿಸಿದ ಹೊಸ ಕಾರುಗಳ ಫೋಟೋಗಳು ಇಲ್ಲವೇ ಅವರ ಸಂತೋಷದ ಕ್ಷಣಗಳ ಸ್ನ್ಯಾಪ್‌ಶಾಟ್‌ಗಳ ಕುರಿತು ನಾವು ಪೋಸ್ಟ್‌ಗಳನ್ನು ನೋಡುತ್ತೇವೆ. ಇವುಗಳನ್ನು ನಾವು ಸಾಂದರ್ಭಿಕವಾಗಿ ನೋಡಿದಾಗಲೂ ಆಗಾಗ್ಗೆ ಅರಿವಿಲ್ಲದೆಯೇ ನಮ್ಮ ಸ್ವಂತ ಜೀವನವು ಅವರ ಜೀವನದೊಂದಿಗೆ ಹೋಲಿಸಲು ಪ್ರಾರಂಭಿಸುತ್ತೇವೆ. 'ಅವರು ಎಷ್ಟು ಸಂತೋಷವಾಗಿದ್ದಾರೆಂದು ನೋಡಿ, ನಾನು ಇನ್ನೂ ನಾನಿರುವ ಸ್ಥಳದಲ್ಲಿ ಏಕೆ ಸಿಲುಕಿಕೊಂಡಿದ್ದೇನೆ' ಎಂಬಂತಹ ಆಲೋಚನೆಗಳು ನಮ್ಮ ಮನಸ್ಸಿನ ಶಾಂತಿಯನ್ನು ಹಾಳುಮಾಡಬಹುದು. ಸೋಶಿಯಲ್ ಮೀಡಿಯಾದಲ್ಲಿ ಪ್ರದರ್ಶಿಸಲ್ಪಡುವುದು ಸಾಮಾನ್ಯವಾಗಿ ವ್ಯಕ್ತಿಯ ಜೀವನದ ಸಂಪೂರ್ಣತೆಯನ್ನು ಪ್ರತಿನಿಧಿಸುವುದಿಲ್ಲ.

ಕೆಲವೇ ಆಹ್ಲಾದಕರ ಕ್ಷಣಗಳನ್ನು ಮಾತ್ರ ಪ್ರತಿನಿಧಿಸುತ್ತದೆ ಎಂಬುದನ್ನು ನಾವು ಹೆಚ್ಚು ಅರ್ಥ ಮಾಡಿಕೊಳ್ಳಬೇಕು. ಇದನ್ನು ನಿವಾರಿಸುವ ಮಾರ್ಗವೆಂದರೆ ನಮ್ಮನ್ನು ಇತರರೊಂದಿಗೆ ಹೋಲಿಸಿಕೊಳ್ಳುವುದನ್ನು ನಿಲ್ಲಿಸುವುದು ಹಾಗೂ ಬದಲಾಗಿ ನಮ್ಮದೇ ಆದ ಸಣ್ಣ ಪ್ರಗತಿಯ ಮೈಲಿಗಲ್ಲುಗಳನ್ನು ಆಚರಿಸುವುದು. ನಮ್ಮ ದೇಹ ಹಾಗೂ ಮನಸ್ಸಿಗೆ ನಿದ್ರೆ ಅತ್ಯುತ್ತಮ ನೈಸರ್ಗಿಕ ಪರಿಹಾರವಾಗಿದೆ. ನಾವು ಮಲಗಿದ ನಂತರ ನಮ್ಮ ಮೊಬೈಲ್ ಫೋನ್‌ಗಳನ್ನು ನೋಡುತ್ತಲೇ ಇರುವಾಗ ನಮ್ಮ ನಿದ್ರೆ ತೀವ್ರವಾಗಿ ದುರ್ಬಲಗೊಳ್ಳುತ್ತದೆ.

'ನಾನು ಮಲಗುವ ಮೊದಲು ಇನ್ನೊಂದು ವಿಡಿಯೋವನ್ನು ನೋಡುತ್ತೇನೆ' ಎಂಬ ಆಲೋಚನೆಯಿಂದ ಆರಂಭಿಸಿ, ಮಧ್ಯರಾತ್ರಿಯ ಬಳಿಕ ಸ್ಕ್ರೀನ್ ಸ್ಕ್ರೋಲ್ ಮಾಡುವುದು ದೇಹ ಹಾಗೂ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಸಾಕಷ್ಟು ನಿದ್ರೆಯ ಕೊರತೆಯು ಮರುದಿನ ನಮ್ಮನ್ನು ಕೋಪ, ಅನಗತ್ಯ ಆತಂಕಕ್ಕೆ ಗುರಿಯಾಗಿಸುತ್ತದೆ.

ಹೆಚ್ಚುವರಿಯಾಗಿ ನಮ್ಮಲ್ಲಿ ಹಲವರು ಆಯಾಸವನ್ನು ಎದುರಿಸಲು ಆಗಾಗ್ಗೆ ಕಾಫಿ ಇಲ್ಲವೇ ಚಹಾ ಕುಡಿಯುವ ಅಭ್ಯಾಸವನ್ನು ಹೊಂದಿರುತ್ತಾರೆ. ಈ ಪಾನೀಯಗಳಲ್ಲಿರುವ ಕೆಫೀನ್ ತಾತ್ಕಾಲಿಕ ಶಕ್ತಿಯನ್ನು ಹೆಚ್ಚಿಸುತ್ತದೆಯಾದರೂ, ಅತಿಯಾದ ಸೇವನೆಯು ನಮ್ಮ ಹೃದಯ ಬಡಿತ ಹೆಚ್ಚಿಸಲು ಕಾರಣವಾಗಬಹುದು. ಈಗಾಗಲೇ ಸೌಮ್ಯ ಆತಂಕ ಅನುಭವಿಸುತ್ತಿರುವವರಿಗೆ ಇದು ಹೃದಯ ಬಡಿತವನ್ನು ಮತ್ತಷ್ಟು ಹೆಚ್ಚಿಸಬಹುದು ಹಾಗೂ ಮನಸ್ಸನ್ನು ಪ್ರಕ್ಷುಬ್ಧ, ಅಸ್ಥಿರವಾಗಿ ಅನುಭವಿಸುವಂತೆ ಮಾಡುತ್ತದೆ.

ನಮ್ಮಲ್ಲಿರುವ ಮತ್ತೊಂದು ಗಮನಾರ್ಹ ದೌರ್ಬಲ್ಯವೆಂದರೆ ವಿಳಂಬ ಮಾಡುವ ಅಭ್ಯಾಸ. ನಾವು ನಂತರ ವಿಷಯಗಳನ್ನು ನಿಭಾಯಿಸಬಹುದು ಎಂದು ಭಾವಿಸುವುದು. ನಮಗೆ ಪೂರ್ಣಗೊಳಿಸಲು ಕಷ್ಟಕರವಾದ ಕೆಲಸವಿದ್ದರೆ, ಯಾರೊಂದಿಗಾದರೂ ಅಹಿತಕರ ಸಂಭಾಷಣೆ ಇದ್ದರೆ, ನಾನು ಅದನ್ನು ನಾಳೆ ನಿಭಾಯಿಸುತ್ತೇನೆ ಎಂದು ಹೇಳುವ ಮೂಲಕ ಇದನ್ನು ಹೆಚ್ಚಾಗಿ ಮುಂದೂಡುತ್ತೇವೆ.



ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

# ಆನೆ ಬೀದಿಯಲ್ಲಿ ಹೋಗುತ್ತಿರುವಾಗ ನಾಯಿ ಬೊಗಳಿದರೆ ಆನೆ ಕೇಳಿಸಿಕೊಳ್ಳುವುದಿಲ್ಲ. ಅದೇ ರೀತಿ ನಾಯಿ ಬೊಗಳಿದರೆ ದೇವಲೋಕ ಏನೂ ಹಾಳಾಗುವುದಿಲ್ಲ

**ಆನೆಗೆ ನೂರು ವರ್ಷಗಳು ಆಯಸ್ಸು ಅದೇ ನಾಯಿಗೆ 15 ವರ್ಷ ಆಯಸ್ಸು. ಅವುಗಳು ವಿವೇಚನಾ ಶಕ್ತಿಯ ತಿಳುವಳಿಕೆಯನ್ನು ಮಾನವನಿಂದ ಗ್ರಹಿಸಿ ಮಾನವನ ಸಂಬಂಧದ ಜೊತೆಗೆ ಬಹಳ ನಂಬಿಕೆಯಿಂದ ಗುರುತಿಸಿಕೊಂಡು ಆಯಸ್ಸನ್ನು ಮುಗಿಸುತ್ತವೆ.ನಾವು ಪ್ರಜ್ಞಾವಂತರಾದ ಮೇಲೆ ನಾವು ಮಾಡುವ ಕೆಲಸ ತೃಪ್ತಿ ಇದ್ದರೆ ಸಾಕು ಬೇರೆಯವರು ಒಪ್ಪಲಿ- ಒಪ್ಪದಿರಲಿ,ಮೆಚ್ಚಲಿ- ಮೆಚ್ಚದಿರಲಿ, ಇಷ್ಟಪಡಲಿ ಅಥವಾ ಇಷ್ಟ ಪಡದೇ ಇರಲಿ ಆ ಬಗ್ಗೆ ಚಿಂತನೆ ಅನಗತ್ಯ.ಮನುಷ್ಯರಾದ ನಾವುಗಳು ಹೃದಯ ಸಾಕ್ಷಿ,ಆತ್ಮಸಾಕ್ಷಿ ಮತ್ತು ಮನ:ಸಾಕ್ಷಿಯಾಗಿ ತನ್ನ ಕರ್ತವ್ಯವನ್ನು ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಮಾಡಿ ಮುಗಿಸಬೇಕು.ತಮ್ಮಗಳ ನಡೆ-ನುಡಿ,ದಾರಿ ಮಾರ್ಗ,ಕೆಲಸ ಇವುಗಳು ಸರಿ ಎಂದು ತಮಗೆ ತೋಚಿ ಮುನ್ನುಗ್ಗುವ ಇವುಗಳ ಬಗ್ಗೆ ಯಾರಾದರೂ ಅಡ್ಡಿಪಡಿಸಿದರೆ ಅಲಕ್ಷ್ಯ ಮಾಡಿ ಅದೊಂದು ಕೊಡುಗೆ ಎಂದು ಸ್ವೀಕರಿಸಿ.**

ಆನೆ ಮತ್ತು ನಾಯಿ ಇವುಗಳ ಗುಣ ಮತ್ತು ನಂಬಿಕೆಯನ್ನು ಆಧಾರವಾಗಿಟ್ಟು ಕೊಂಡು ಮಾನಸಿಕ ಸ್ಥಿತಿಯನ್ನು ಕಳೆದುಕೊಂಡಿರುವ ಮಾನವನಿಗೆ ಪರೋಕ್ಷವಾಗಿ ತಿಳಿಹೇಳಲು ಈ ಪದವನ್ನು ಹಳೆಯ ಕಾಲದ ಅನುಭವಿ ಕಾಲಜ್ಞಾನಿಗಳು ತಿಳಿಸಿರುತ್ತಾರೆ.

ಈ ಜಗತ್ತು ಕಂಡ ಈ ರಾಷ್ಟ್ರ ಕಂಡ ಅತ್ಯಂತ ಪ್ರಭಾವಶಾಲಿ ಇತಿಹಾಸ ಪ್ರಸಿದ್ಧರು, ಸ್ವಾತಂತ್ರ್ಯ ಹೋರಾಟಗಾರರು, ಜ್ಞಾನಜ್ಯೋತಿಗಳು, ರಾಷ್ಟ್ರಜ್ಯೋತಿಗಳು, ಸಮಾಜ ಸುಧಾರಕರು, ದಾರ್ಶನಿಕರು, ಮೇಧಾವಿಗಳು,ಪ್ರಸಿದ್ಧ ರಾಜಕೀಯ ಮುಖಂಡರುಗಳು, ಸಾಹಿತ್ಯ ಲೋಕದ ಮೇರು ಶಿಖರಗಳು, ಕಲಾಲೋಕದ ಮಿನುಗು ತಾರೆಗಳು, ವಿಜ್ಞಾನ ಕ್ಷೇತ್ರದ ಧ್ರುವ ನಕ್ಷತ್ರಗಳು, ಸಾಹಿಸಿ ಉದ್ಯಮಿಗಳು, ಕ್ರೀಡಾ ಪ್ರತಿಭೆಗಳು ಹಾಗೂ ಇನ್ನಿತರೆ ಸುಪ್ರಸಿದ್ಧರ ಬದುಕಿನಲ್ಲಿ ಅನೇಕಾನೇಕ ಅವಮಾನಗಳು, ಅನುಮಾನಗಳು, ಆಪಾದನೆಗಳು, ಗಂಡಾಂತರಗಳು, ನಿಂದನೆಗಳು,ಅನೇಕ ಭಿನ್ನಾಭಿಪ್ರಾಯಗಳು, ತಾರತಮ್ಯಗಳು,ಅನೇಕ ಸಮಸ್ಯೆಗಳು ಎದುರಾದವು.

ಆದರೆ ಇದ್ಯಾವುದಕ್ಕೂ ಅವರುಗಳೆಲ್ಲಾ ಎದೆಗುಂದದೇ ಸಮರ್ಥವಾಗಿ ನಿರ್ವಂಚನೆಯಿಂದ ನಿರ್ವಹಿಸಿ ತಮ್ಮಗಳ ಸಾಧನೆಗಳನ್ನು ಮುನ್ನಡೆಸಿ ಪ್ರಾತಃ ಸ್ಮರಣೀಯರಾಗಿದ್ದಾರೆ.ಅವರುಗಳು ತಮ್ಮಗಳ ಜೀವನದ ಬದುಕಿನಲ್ಲಿ ಕಾಲ-ದೇಶ- ಜಾತಿ-ಧರ್ಮ, ಸಂಪ್ರದಾಯ, ಪಕ್ಷ ಮೀರಿ ಬದುಕಿದ ಜೀವಗಳು. ಆನೆ ಮತ್ತು ನಾಯಿಯ ಬಗ್ಗೆ ಪ್ರಸ್ತಾಪಿಸಿರುವ ಸಾಮಾನ್ಯ ಗಾದೆಯನ್ನು ತಮ್ಮಗಳ ಜೀವನದಲ್ಲಿ ಶಾಶ್ವತವಾಗಿ ಜೀವನ ಪರ್ಯಂತ ಅಳವಡಿಸಿಕೊಂಡಿದ ವಿಭೂತಿ ಪುರುಷರು.

ಜಗತ್ತಿನಲ್ಲಿ ಜಗತ್ತು ಮತ್ತು ರಾಷ್ಟ್ರ ಮೆಚ್ಚುವ ರೀತಿ ಬದುಕಿ ಕೀರ್ತಿ ತಂದು ಬೆಳಕು ಮಾಡುವ ಮಹನೀಯರಿಗೆ ನಂಬಲಾರದ ಅನೇಕ ಗಂಡಾಂತರಗಳು ಎದುರಾಗುತ್ತವೆ ಇದು ಸಹಜ. ಸಮಾಜ ಮತ್ತು ರಾಷ್ಟ್ರದಲ್ಲಿ ಗಟ್ಟಿಯಾಗಿ ನಿಂತು ಹೋರಾಟ ಮಾಡಿ ಒಂದು ಸ್ಥಾನಕ್ಕೆ ನಿಲ್ಲಬೇಕಾದರೆ ಏಳು ಕೆರೆಯ ನೀರನ್ನು ಕುಡಿಯಬೇಕು ಅಂತಹ ಜನರು ಈ ನಾಡಲ್ಲಿ ಇದ್ದಾರೆ ಅಂಥವರ ಮುಂದೆ ಮೆಟ್ಟಿ ನಿಲ್ಲಬೇಕು.

ಒಟ್ಟಾರೆ ಇದರ ಅರ್ಥ ಕಾಯಾ-ವಾಚಾ-ಮನಸಾ ಶುದ್ಧಿಯಿಂದ ದೇಹ, ಇಂದ್ರಿಯ,ಮಾತು,ಮನ ಮತ್ತು ಬುದ್ಧಿ ಎಂಬ ಪಂಚ ಸಾಧನೆಗಳಿಂದ ಹಾಗೂ ಆತ್ಮಗೌರವ, ಆತ್ಮಸಂಯಮ, ಆತ್ಮಸ್ಥೈರ್ಯ, ಆತ್ಮವಿಶ್ವಾಸ ಮತ್ತು ಆತ್ಮಾವಲೋಕನ ಎಂಬ ಪಂಚ ಮಾನವೀಯ ಮೌಲ್ಯಗಳನ್ನು ಮಾನವ ಸದಾ ಜೊತೆಯಲ್ಲಿ ಇಟ್ಟುಕೊಂಡು ಮುನ್ನಡೆಯಬೇಕು.ತಾನೂ ಸಹ ಸಾಧಿಸುವುದಿಲ್ಲ ಅಥವಾ ಸಾಧಿಸುವವರನ್ನು ಕಂಡರೆ ಸುಮ್ಮನಿರುವುದಿಲ್ಲ. ಸಾಧಿಸಲು ಯೋಗ್ಯ ಇಲ್ಲದಿದ್ದರೂ, ಸಾಧಿಸುವ ವರನ್ನು ಕಂಡರೆ ಅಸೂಯೆ , ನಿಂದನೆ ಮಾಡುವುದೇ ಜಾಸ್ತಿ.ತನ್ನಿಂದ ಸಾಧ್ಯ ಆಗದೇ ಇರುವ ಅಸೂಯೆ ಜನಾಂಗ, ಅಲ್ಪಜ್ಞಾನಿಗಳು, ಮೂರ್ಖರು,ಹೇಡಿಗಳು ಹಾಗೂ ಸೋಮಾರಿಗಳು ರಾಷ್ಟ್ರದಲ್ಲಿ ಬಹಳಷ್ಟು ಮಂದಿ ಜೀವಿಸುತ್ತಿದ್ದಾರೆ. ಇಂಥವರ ಮಂದೆ ಸಾಧಕರು ಛಲದಿಂದ ಸಾಧಿಸಿ ಬದುಕಬೇಕು. ಸಾಧಿಸುವ ಸಾಧಕರಿಗೆ ಪ್ರೋತ್ಸಾಹ ನೀಡುವ ಬದಲು ನಿರುತ್ಸಾಹ ತೋರಿಸಿ ಕಡೆಗಣಿಸುವುದೇ ಕೆಲವರ ವ್ಯಕ್ತಿತ್ವ ಗುಣವಾಗಿರುತ್ತದೆ.ಆದ್ದರಿಂದ ಬಾಲ್ಯ, ಯೌವನ ಮರೆತು ಮಧ್ಯವಯಸ್ಸು ನಂತರ ಮಾನವನ ಮನಸ್ಸು, ಹೃದಯ ಪರಿಪಕ್ವ ಆದಮೇಲೆ ತಾವೇ ಸ್ವತಹ ವಿವೇಚನಾಶಕ್ತಿ ಇಟ್ಟುಕೊಂಡು ಎಂಥಹ ಗಂಭೀರ ಸಮಸ್ಯೆಗಳು ಎದುರಾದರೂ ಸಹ ಧೃತಿಗೆಡದೇ ಮುನ್ನುಗ್ಗುವುದೇ ಮಾನವನ ನೈಜ ಗುಣವಾಗಬೇಕು.

ಆರೀತಿ ಬಾಳಿ ಬದುಕುವವರು ನಾಯಿ ಬೊಗಳಿದರೆ ಆನೆ ಹೇಗೆ ಕೇಳಿಸಿಕೊಳ್ಳುವುದಿಲ್ಲವೋ! ಹಾಗೆಯೇ ನಾಯಿ ಬೊಗಳಿದರೆ ದೇವಲೋಕ ಹಾಳ ! ಎಂಬ ಅಮರವಾಣಿಯನ್ನು ಅರ್ಥೈಸಿಕೊಂಡು ಬದುಕುವುದೇ ನಿಜವಾದ ಬದುಕು. ಈ ಪದಗಳ ಅರ್ಥವನ್ನು ಹೇಳುವವರು ಹಾಗೂ ಕೇಳುವವರು ಅರ್ಥೈಸಿಕೊಂಡರೆ ಸಾಕು. ಈ ಪದವು ಸೂಕ್ಷ್ಮತೆ ಹಾಗೂ ಸಂಕುಚಿತ ಸ್ವಭಾವವುಳ್ಳ ಮಾನವನ ಮೇಲೆ ಅನೇಕ ಗಂಭೀರ ಪರಿಣಾಮಗಳನ್ನು ಬೀರಿ ಮನಸ್ಸನ್ನು ಹಿಂಡು ಬಿಡುತ್ತದೆ ಆದರೆ ಮೆಟ್ಟಿನಿಲ್ಲುವ ಅವರುಗಳಿಗೆ ಈ ಪದ ಅನ್ವಯಿಸುವುದಿಲ್ಲ.

# ಕಲ್ಲಂಗಡಿ ಹಣ್ಣಿನಲ್ಲೂ ಅನೇಕ ವಿಧಗಳಿವೆ

ಕಲ್ಲಂಗಡಿ ಬೇಸಿಗೆಯ ಅತ್ಯಂತ ಜನಪ್ರಿಯ ಹಣ್ಣುಗಳಲ್ಲಿ ಒಂದಾಗಿದೆ. ವಿಶ್ವಾದ್ಯಂತ ಜನ ಬೇಸಿಗೆಯ ಸಂದರ್ಭದಲ್ಲಿ ಕಲ್ಲಂಗಡಿ ಹಣ್ಣನ್ನು ಸೇವಿಸಲು ಇಷ್ಟಪಡುತ್ತಾರೆ. ಸುಮಾರು 92 ಪ್ರತಿಶತ ನೀರು, ವಿಟಮಿನ್ ಎ, ಬಿ6, ಸಿ, ಪೊಟ್ಯಾಸಿಯಮ್, ಕಬ್ಬಿಣ ಮತ್ತು ಮೆಗ್ನೀಸಿಯಮ್ ಸಮೃದ್ಧವಾಗಿರುವ ಈ ಹಣ್ಣು ಶಾಖದಿಂದ ಪರಿಹಾರ ನೀಡಿ ದೇಹಕ್ಕೆ ತಾಜಾತನವನ್ನು ಒದಗಿಸುತ್ತದೆ. ಇದರಲ್ಲಿರುವ ಹೆಚ್ಚಿನ ನೀರಿನ ಅಂಶವು ಬೇಸಿಗೆಯಲ್ಲಿ ನಿರ್ಜಲೀಕರಣವನ್ನು ತಡೆಯಲು ಸಹಾಯ ಮಾಡುತ್ತದೆ. ಅಲ್ಲದೆ ಕಲ್ಲಂಗಡಿ ಸೇವನೆಯಿಂದ ರಕ್ತದೊತ್ತಡವನ್ನು ಸಹ



ನಿಯಂತ್ರಿಸಬಹುದು. ಹೀಗೆ ಈ ರುಚಿಕರ ಹಣ್ಣಿನ ಆರೋಗ್ಯ ಪ್ರಯೋಜನಗಳ ಬಗ್ಗೆ ಜನರಿಗೆ ತಿಳಿಸಲು ಪ್ರತಿವರ್ಷ ಆಗಸ್ಟ್ 3 ರಂದು ರಾಷ್ಟ್ರೀಯ ಕಲ್ಲಂಗಡಿ ದಿನವನ್ನು ಆಚರಿಸಲಾಗುತ್ತದೆ. ರಾಷ್ಟ್ರೀಯ ಕಲ್ಲಂಗಡಿ ದಿನದ ಈ ಶುಭ ಸಂದರ್ಭದಲ್ಲಿ ಮಾವಿನಹಣ್ಣಿನಂತೆ ಕಲ್ಲಂಗಡಿ ಹಣ್ಣಿನಲ್ಲಿ ಎಷ್ಟೆಲ್ಲಾ ವಿಧಗಳಿವೆ, ಈ ಹಣ್ಣಿನ ಪ್ರಯೋಜನಗಳೇನು ಎಂಬುದರ ಸಂಪೂರ್ಣ ಮಾಹಿತಿಯನ್ನು ತಿಳಿದುಕೊಳ್ಳಿ. ರಾಷ್ಟ್ರೀಯ ಕಲ್ಲಂಗಡಿ ದಿನವನ್ನು ಪ್ರಪಂಚದ ವಿವಿಧ ಭಾಗಗಳಲ್ಲಿ, ಮುಖ್ಯವಾಗಿ ಅಮೆರಿಕದಲ್ಲಿ ಆಚರಿಸಲಾಗುತ್ತದೆ.

ರಾಷ್ಟ್ರೀಯ ಕಲ್ಲಂಗಡಿ ದಿನವನ್ನು 1980ರ ದಶಕದ ಆರಂಭದಲ್ಲಿ ಯುನೈಟೆಡ್ ಸ್ಟೇಟ್‌ನ ರಾಷ್ಟ್ರೀಯ ಕಲ್ಲಂಗಡಿ ಬೆಳೆಗಾರರು ಮತ್ತು ವಿತರಕರ ಸಂಘವು ಕೃಷಿ ಪ್ರಚಾರ ಕಾರ್ಯಕ್ರಮವಾಗಿ ರಾಷ್ಟ್ರೀಯ ಕಲ್ಲಂಗಡಿ ದಿನವನ್ನು ಪ್ರಾರಂಭಿಸಿತು.

# ವಿಶ್ವ ಶ್ವಾಸಕೋಶ ಕ್ಯಾನ್ಸರ್ ದಿನ 2026: ಶ್ವಾಸಕೋಶದ ಕ್ಯಾನ್ಸರ್ ತಡೆಗಟ್ಟಲು ತೆಗೆದುಕೊಳ್ಳಬೇಕಾದ ಕ್ರಮಗಳೇನು?

ಧೂಮಪಾನ ಮಾಡದಿದ್ದರೆ ಶ್ವಾಸಕೋಶದ ಕ್ಯಾನ್ಸರ್ ಬರುವುದಿಲ್ಲ ಎಂದು ಅನೇಕರು ಭಾವಿಸುವುದು ತುಂಬಾ ದೊಡ್ಡ ತಪ್ಪು. ಶ್ವಾಸಕೋಶದ ಕ್ಯಾನ್ಸರ್ ಅಪಾಯವನ್ನು ಹೆಚ್ಚಿಸುವ ಸಂದರ್ಭಗಳನ್ನು ಅರ್ಥಮಾಡಿಕೊಳ್ಳುವುದು ಹಾಗೂ ನಿರ್ಲಕ್ಷಿಸದೆ ಇರುವ ಎಚ್ಚರಿಕೆ ಚಿಹ್ನೆಗಳನ್ನು ಗುರುತಿಸುವುದು ತುಂಬಾ ಮುಖ್ಯವಾಗುತ್ತದೆ. ಪ್ರಪಂಚದಾದ್ಯಂತ ಉಸಿರಾಟ ಹಾಗೂ ಶ್ವಾಸಕೋಶದ ಕಾಯಿಲೆಗಳ ಪ್ರಕರಣಗಳು ವೇಗವಾಗಿ ಏರಿಕೆಯಾಗುತ್ತಿವೆ. ವಿಶ್ವ ಆರೋಗ್ಯ ಸಂಸ್ಥೆ ವರದಿ ತಿಳಸುವ ಪ್ರಕಾರ, ವಿಶ್ವದಾದ್ಯಂತ ಶ್ವಾಸಕೋಶದ ಕ್ಯಾನ್ಸರ್‌ಪ್ರಕರಣಗಳು ಏರಿಕೆಯಾಗುತ್ತಿವೆ ಹಾಗೂ ಈ ಕಾಯಿಲೆಯಿಂದ ಸಾವು ಹೆಚ್ಚಾಗುತ್ತಿವೆ. ಪ್ರತಿವರ್ಷ ಅಂದಾಜು 2.5 ಮಿಲಿಯನ್ ಹೊಸ ಪ್ರಕರಣಗಳು ವರದಿಯಾಗುತ್ತವೆ. ಇದರ ಪರಿಣಾಮವಾಗಿ 1.8 ಮಿಲಿಯನ್ ಸಾವುಗಳು ವರದಿಯಾಗುತ್ತಿವೆ. ಕೆಲವು ದಶಕಗಳ ಹಿಂದೆ ವಯಸ್ಸಾದವರಿಗೆ ಮಾತ್ರ ಈ ಕಾಯಿಲೆ ಬರುತ್ತಿತ್ತು. ಇದೀಗ ಚಿಕ್ಕ ವಯಸ್ಸಿನವರೂ ಕೂಡ ಶ್ವಾಸಕೋಶದ ಕ್ಯಾನ್ಸರ್‌ಗೆ ಬಲಿಯಾಗುತ್ತಿದ್ದಾರೆ. ಶ್ವಾಸಕೋಶದ ಕ್ಯಾನ್ಸರ್ ಧೂಮಪಾನಿಗಳ ಮೇಲೆ ಮಾತ್ರ ಪರಿಣಾಮ ಬೀರುತ್ತದೆ ಎನ್ನುವುದು ಹಲವರ ಭಾವನೆಯಾಗಿದೆ. ಜೀವನದಲ್ಲಿ ಎಂದಿಗೂ ಸಿಗರೇಟ್, ಬೀಡಿ ಸೇದದೆ ಇರುವವರು ಹೆಚ್ಚಿನ ಸಂಖ್ಯೆಯಲ್ಲಿ ಈ ಕಾಯಿಲೆಯಿಂದ ಬಳಲುತ್ತಿದ್ದಾರೆ ಎಂದು ಸಂಶೋಧಕರು ತಿಳಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಧೂಮಪಾನ ಮಾಡದವರಲ್ಲಿ ಶ್ವಾಸಕೋಶದ ಕ್ಯಾನ್ಸರ್ ಪ್ರಕರಣಗಳು ಹೆಚ್ಚುತ್ತಿರುವುದು ಕಂಡುಬಂದಿದೆ. ವಾರ್ಷಿಕವಾಗಿ ಆಗಸ್ಟ್ 1 ರಂದು ವಿಶ್ವ ಶ್ವಾಸಕೋಶದ ಕ್ಯಾನ್ಸರ್ ದಿನವನ್ನು ಆಚರಿಸಲಾಗುತ್ತದೆ. ಈ ಕಾಯಿಲೆಯ ಕುರಿತು ಜಾಗೃತಿ ಮೂಡಿಸಲು, ಆರಂಭಿಕವಾಗಿ ಪತ್ತೆ ಹಚ್ಚುವಿಕೆ ಉತ್ತೇಜಿಸಲು ಹಾಗೂ ರೋಗದಿಂದ ಬಳಲುತ್ತಿರುವವರಿಗೆ ಬೆಂಬಲ ನೀಡುವುದು ಈ ದಿನದ ಉದ್ದೇಶವಾಗಿದೆ. 2012ರಲ್ಲಿ ಅಂತಾರಾಷ್ಟ್ರೀಯ ಉಸಿರಾಟದ ಸಂಘಗಳ ವೇದಿಕೆ ಆರಂಭಿಸಲಾಯಿತು. ಧೂಮಪಾನದ ಜೊತೆಗೆ ವಾಯು ಮಾಲಿನ್ಯ, ಸೆಕೆಂಡ್ ಹ್ಯಾಂಡ್ ಹೊಗೆ, ಮರದ ಹಾಗೂ ಕಲ್ಲಿದ್ದಲಿನ ಹೊಗೆಗೆ ದೀರ್ಘಕಾಲದವರೆಗೆ ಒಡ್ಡಿಕೊಳ್ಳುವುದು, ಕೆಲವು ರಾಸಾಯನಿಕ ಪದಾರ್ಥಗಳ ಸಂಪರ್ಕದಂತಹ ಅಂಶಗಳು ಶ್ವಾಸಕೋಶದ ಕ್ಯಾನ್ಸರ್ ಅಪಾಯ ಹೆಚ್ಚಿಸಬಹುದು ಎಂದು ಸಂಶೋಧನೆಗಳು ಸೂಚಿಸುತ್ತವೆ.

# ಅನಿಯಮಿತ ಹೃದಯ ಬಡಿತ: ಹೃದಯದ ಬಡಿತದ ಲಯದ ಸಮಸ್ಯೆಯನ್ನು ಆರಂಭದಲ್ಲೇ ಗುರುತಿಸಿ

ಹೃದಯದ ಬಡಿತದ ಲಯದ ಸಮಸ್ಯೆಗಳು ಸಾಮಾನ್ಯವಾಗಿ ಗಂಭೀರ ಆರೋಗ್ಯ ಸಮಸ್ಯೆಗಳೊಂದಿಗೆ ಸಂಬಂಧ ಹೊಂದಿವೆ ಎಂದು ಭಾವಿಸಲಾಗುತ್ತದೆ. ಆದರೆ, ಇದರ ಆರಂಭಿಕ ಲಕ್ಷಣಗಳು ಕೆಲವೊಮ್ಮೆ ತುಂಬಾ ಸೂಕ್ಷ್ಮವಾಗಿರಬಹುದು. ಉದಾಹರಣೆಗೆ, ಹೃದಯದ ಬಡಿತ ಅನಿಯಮಿತವಾಗಿರುವುದು, ಎದೆಯಲ್ಲಿ ಕ್ಷಣಕಾಲ ಹೃದಯ ಬಡಿತವು ಫಡಫಡಿಸುವಂತೆ ಅನಿಸು ವುದು ಅಥವಾ ಹಠಾತ್ ಕೆಲ ಕ್ಷಣಗಳ ಕಾಲ ಹೃದಯ ಬಡಿತ ವೇಗವಾಗಿ ಆಗುವುದು.

ಇಂತಹ ಲಕ್ಷಣಗಳು ಅರಿತ್ಮಿಯಾ (ಹೃದಯದ ಬಡಿತದ ಲಯದ ಸಮಸ್ಯೆ) ಇರುವ ಸೂಚನೆಯಾಗಿರ ಬಹುದು. ಈ ಸ್ಥಿತಿಯಲ್ಲಿ ಹೃದಯವು ತುಂಬಾ ವೇಗವಾಗಿ, ತುಂಬಾ ನಿಧಾನವಾಗಿ ಅಥವಾ ಅನಿಯಮಿತವಾಗಿ ಬಡಿಯುತ್ತದೆ. ಪ್ರತಿಯೊಂದು ಅನಿಯಮಿತ ಹೃದಯ ಬಡಿತವೂ ಅಪಾಯ ಕಾರಿಯೇ ಎಂದಲ್ಲ.

**ಆದರೆ ಈ ಲ ಅನಿಯಮಿತ ಹೃದಯ ಬಡಿತ:** ಹೃದಯದ ಬಡಿತದ ಲಯದ ಸಮಸ್ಯೆಯನ್ನು ಆರಂಭದಲ್ಲೇ ಗುರುತಿಸಿ ಕ್ಷಣಗಳು ಹೊಸದಾಗಿ ಕಾಣಿಸಿಕೊಂಡರೆ, ಮತ್ತೆ ಮತ್ತೆ ಕಾಣಿಸಿ ಕೊಂಡರೆ ಅಥವಾ ಆತಂಕ ಉಂಟುಮಾಡಿದರೆ, ಅರ್ಹ ಆರೋಗ್ಯ ತಜ್ಞರನ್ನು ಸಂಪರ್ಕಿಸಿ ತಕ್ಷಣ ಪರೀಕ್ಷೆ ಮಾಡಿಸಿಕೊಳ್ಳುವುದು ಮುಖ್ಯ. ಭಾರತದಂತಹ ದೇಶದಲ್ಲಿ ಈ ವಿಷಯ ಇನ್ನಷ್ಟು ಮಹತ್ವದ್ದಾಗಿದೆ, ಏಕೆಂದರೆ ಹೃದಯ ಮತ್ತು ರಕ್ತನಾಳಗಳಿಗೆ ಸಂಬಂಧಿಸಿದ ಕಾಯಿಲೆಗಳು ಇಂದಿಗೂ ಸಾರ್ವಜನಿಕ ಆರೋಗ್ಯದ ಪ್ರಮುಖ ಸವಾಲಾಗಿವೆ.

ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಪ್ರಕಾರ, ಪ್ರತಿವರ್ಷ ಜಗತ್ತಿನಾದ್ಯಂತ ಲಕ್ಷಾಂತರ ಜನರು ಹೃದಯ ಮತ್ತು ರಕ್ತನಾಳಗಳ ಕಾಯಿಲೆಗಳಿಂದ ಬಳಲುತ್ತಾರೆ. ಅರಿತ್ಮಿಯಾ ಯಾವುದೇ ವಯಸ್ಸಿನವರಿಗೂ ಉಂಟಾಗಬಹುದು. ಆದರೆ ವಯಸ್ಸು ಹೆಚ್ಚಾದಂತೆ ಇದರ ಸಾಧ್ಯತೆ ಗಣನೀಯವಾಗಿ ಹೆಚ್ಚುತ್ತದೆ ಮತ್ತು ವಯೋವೃದ್ಧರಲ್ಲಿ ಇದು ಹೆಚ್ಚು ಕಂಡು ಬರುತ್ತದೆ. ಅಂದಾಜಿನ ಪ್ರಕಾರ, ವಯೋವೃದ್ಧರಲ್ಲಿ ಸುಮಾರು 60% ಜನರು ಯಾವುದಾದರೂ ಒಂದು ರೀತಿಯ ಅರಿತ್ಮಿಯಾದಿಂದ ಬಳಲುವ ಸಾಧ್ಯತೆ ಇದೆ.

ಹೃದಯ ಮತ್ತು ರಕ್ತನಾಳಗಳ ಕಾಯಿಲೆಗಳ ಈ ಹೆಚ್ಚುತ್ತಿರುವ ಹೊರೆ ನಡುವೆ, ಹೃದಯದ ಬಡಿತದ ಲಯದ ಸಮಸ್ಯೆಗಳ ಬಗ್ಗೆ ಹೆಚ್ಚಿನ ಗಮನ ಹರಿಸುವುದು ಅಗತ್ಯವಾಗಿದೆ. ಏಕೆಂದರೆ, ಈ ಸಮಸೆಯ ಲಕ್ಷಣಗಳನ್ನು ಹಲವಾರು ಬಾರಿ ಒತ್ತಡ, ಆಯಾಸ ಅಥವಾ ಜೀವನಶೈಲಿಗೆ ಸಂಬಂಧಿಸಿದ ದಣಿವು ಎಂದು ತಪ್ಪಾಗಿ ಭಾವಿಸಿ ನಿರ್ಲಕ್ಷಿಸಲಾಗುತ್ತದೆ.

ಹೃದಯದ ವಿದ್ಯುತ್ ವ್ಯವಸ್ಥೆ (ಎಲೆಕ್ಟ್ರಿಕಲ್ ಸಿಸ್ಟಮ್) ಸರಿಯಾಗಿ ಕಾರ್ಯನಿರ್ವಹಿಸದಾಗ ಅರಿತ್ಮಿಯಾ ಉಂಟಾಗುತ್ತದೆ. ಇದರಿಂದ ಹೃದಯವು ತುಂಬಾ ವೇಗವಾಗಿ (ಟ್ಯಾಕಿಕಾರ್ಡಿಯಾ), ತುಂಬಾ ನಿಧಾನವಾಗಿ (ಬ್ರಾಡಿಕಾರ್ಡಿಯಾ) ಅಥವಾ ಏಟ್ರಿಯಲ್ ಫೈಬ್ರಿಲೇಶನ್‌ನಂತಹ ಸ್ಥಿತಿಯಲ್ಲಿ ಅನಿಯಮಿತವಾಗಿ ಬಡಿಯಬಹುದು.ಕೆಲವು ರೀತಿಯ ಅರಿತ್ಮಿಯಾ ದಲ್ಲಿ ಹೃದಯ ಬಡಿತ ಜೋರಾಗಿ ಅಥವಾ ವೇಗವಾಗಿ ಅನುಭವ ವಾಗುವುದು, ಉಸಿರಾಟದ ತೊಂದರೆ, ಆಯಾಸ, ತಲೆಸುತ್ತು ಅಥವಾ ಪ್ರಜ್ಞೆ ತಪ್ಪುವುದು ಮುಂತಾದ ಸ್ಪಷ್ಟ ಲಕ್ಷಣಗಳು ಕಾಣಸಬಹುದು.

ಆದರೆ ಕೆಲವು ಸಂದರ್ಭಗಳಲ್ಲಿ ಯಾವುದೇ ಲಕ್ಷಣಗಳು ಕಾಣಿಸದೇ ಇರಬಹುದು. ಈ ಸಮಸ್ಯೆಯ ಲಕ್ಷಣಗಳನ್ನು ಹಲವಾರು ಬಾರಿ ಒತ್ತಡ, ಆಯಾಸ ಅಥವಾ ಜೀವನಶೈಲಿಗೆ ಸಂಬಂಧಿಸಿದ ದಣಿವು ಎಂದು ತಪ್ಪಾಗಿ ಭಾವಿಸಿ ನಿರ್ಲಕ್ಷಿಸಲಾಗುತ್ತದೆ. ವೈದ್ಯಕೀಯ ಪರೀಕ್ಷೆಯ ವೇಳೆ ಮಾತ್ರ ಈ ಸಮಸ್ಯೆ ಪತ್ತೆಯಾಗುತ್ತದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ಒತ್ತಡ ಸಣ್ಣ ಅನಾರೋಗ್ಯಕ್ಕೆ ಕಾರಣವಾಗಬಹುದು. ಆರಾಮವಾಗಿರಲು ಸ್ನೇಹಿತರು ಮತ್ತು ಕುಟುಂಬದ ಸದಸ್ಯರ ಜೊತೆಗಿರಿ. ನೀವು ನಿಮ್ಮನ್ನು ಒಂದು ರೋಮಾಂಚಕಾರಿ ಪರಿಸ್ಥಿತಿಯಲ್ಲಿ ಕಂಡುಕೊಳ್ಳಬಹುದು–ಇದು ನಿಮಗೆ ಆರ್ಥಿಕ ಲಾಭವನ್ನೂ ತರುತ್ತದೆ.

**ವೃಷಭ** ಮಾನಸಿಕ ಶಾಂತಿಗಾಗಿ ಕೆಲವು ದಾನ ಧರ್ಮಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ಮಕ್ಕಳು ನಿಮ್ಮ ಗೃಹಕೃತ್ಯಗಳನ್ನು ಮುಗಿಸುವಲ್ಲಿ ನಿಮಗೆ ಸಹಾಯ ಮಾಡುತ್ತಾರೆ. ತಮ್ಮ ಬಿಡುವಿನ ವೇಳೆಯಲ್ಲಿ ಈ ರೀತಿಯ ಚಟುವಟಿಕೆಗಳನ್ನು ಮಾಡಲು ಅವರಿಗೆ ಪ್ರೋತ್ಸಾಹಿಸಿ.

**ಮಿಥುನ** ಒಳ್ಳೆಯದೆಂದು ನಿಮಗೆ ಮಾತ್ರ ಗೊತ್ತು ಆದ್ದರಿಂದ ಧೃಢವಾಗಿರಿ ಧೈರ್ಯಶಾಲಿಗಳಾಗಿರಿ ಮತ್ತು ತಕ್ಷಣದ ನಿರ್ಧಾರಗಳನ್ನು ತೆಗೆದುಕೊಳ್ಳಿ ಫಲಿತಾಂಶಗಳಿಗೆ ಸಿದ್ಧವಾಗಿರಿ. ಇಂದು ಹಣ ನಿಮ್ಮ ಕೈಯಲ್ಲಿ ಉಳಿಯುದಿಲ್ಲ. ಇಂದು ನೀವು ಹಣವನ್ನು ಉಳಿಸುವಲ್ಲಿ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ.

**ಕರ್ಕಾಟಕ** ಸಂತೋಷದಿಂದ ತುಂಬಿದ ಒಳ್ಳೆಯ ದಿನ. ಇಂದು ನೀವು ನಿಮ್ಮ ಮಕ್ಕಳ ಕಾರಣದಿಂದ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಕಂಡುಬರುತ್ತಿದೆ. ಇದರಿಂದ ನೀವು ತುಂಬಾ ಸಂತೋಷಪಡುತ್ತೀರಿ. ನೀವು ನಂಬುವ ಯಾರಾದರೂ ನಿಮಗೆ ಸಂಪೂರ್ಣ ನಿಜ ಹೇಳದಿರಬಹುದು.

**ಸಿಂಹ** ಜೀವನದೆಡೆಗೆ ಉದಾರವಾದ ಮನೋಭಾವ ಹೊಂದಿ. ದೂರು ನೀಡುವುದು ನಿಮ್ಮ ಜೀವನಮಟ್ಟದ ಬಗೆಗೆ ಅಸಮಾಧಾನ ಹೊಂದುವುದರಿಂದ ಯಾವುದೇ ಪ್ರಯೋಜನವಿಲ್ಲ. ಇದು ಜೀವನದ ಸುಗಂಧವನ್ನು ಹಾಳುಮಾಡುವ ಒಂದು ಸಮೃದ್ಧ ಜೀವನವನ್ನು ನಡೆಸುವ ಬಯಕೆಯನ್ನು ಸಾಯಿಸುವ ನೀಚ ಚಿಂತನೆಯಾಗಿದೆ.

**ಕನ್ಯಾ** ಸಣ್ಣ ಉದ್ಯೋಗವನ್ನು ಮಾಡುವ ಜನರು, ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ. ಬೇಕಷ್ಟು ಮೊದಲೇ ಯೋಜಿಸಿದ ಪ್ರಯಾಣದ ಕಾರ್ಯಕ್ರಮಗಳು ಕುಟುಂಬದಲ್ಲಿನ ಆರೋಗ್ಯದ ಸಮಸ್ಯೆಗಳಿಂದಾಗಿ ಮುಂದೂಡಲಾಗಬಹುದು.

**ತುಲಾ** ಹಠಮಾರಿ ಧೋರಣೆ ಕೇವಲ ಸಮಯ ವ್ಯರ್ಥವಾದದ್ದರಿಂದ ಅದನ್ನು ಸಂತೋಷದ ಜೀವನದ ಸಲುವಾಗಿ ತೊರೆದುಬಿಡಿ. ನೀವು ಅತ್ಯಂತ ಅನಿರೀಕ್ಷಿತ ಮೂಲಗಳಿಂದ ಗಳಿಕೆಯ ಸಾಧ್ಯತೆಯನ್ನು ಹೊಂದಿದ್ದೀರಿ. ನೀವು ಪ್ರೀತಿಪಾತ್ರರ ಜೊತೆ ವಾದಗಳಿಗೆ ಕಾರಣವಾಗಬಹುದಾದ ವಿವಾದಾತ್ಮಕ ವಿಷಯಗಳನ್ನು ತಪ್ಪಿಸಬೇಕು.

**ವೃಶ್ಚಿಕ** ಕೆಲಸದಲ್ಲಿ ಹಿರಿಯರಿಂದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಅವರು ಇಂದು ಎಲ್ಲಿಂದಲಾದರೂ ಹಣವನ್ನು ಪಡೆಯಬಹುದು, ಇದು ಜೀವನದ ಅನೇಕ ಸಮಸ್ಯೆಗಳನ್ನು ತೆಗೆದುಹಾಕುತ್ತದೆ.

**ಧನಸ್ಸು** ಆಕರ್ಷಕವಾದ ಮತ್ತು ನಿಮ್ಮನ್ನು ಶಾಂತವಾಗಿರಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ಇಲ್ಲಿಯವರೆಗೆ ಅನಗತ್ಯವಾಗಿ ಹಣವನ್ನು ಖರ್ಚು ಮಾಡುತ್ತಿದ್ದವರು ಜೀವನದಲ್ಲಿ ಹಣದ ಪ್ರಾಮುಖ್ಯತೆ ಏನು ಎಂಬುದನ್ನು ಅರ್ಥಮಾಡಿಕೊಳ್ಳಬಹುದು ಏಕೆಂದರೆ ಇಂದು ಇದ್ದಕ್ಕಿದ್ದಂತೆ ನಿಮಗೆ ಹಣದ ಅಗತ್ಯವಿರುತ್ತದೆ.

**ಮಕರ** ನಿಮ್ಮ ನಿರಂತರ ಸಕಾರಾತ್ಮಕ ಚಿಂತನೆಯನ್ನು ಪ್ರಶಂಸಿಸಲಾಗುತ್ತದೆ. ನಿಮ್ಮ ಪ್ರಯತ್ನದಲ್ಲಿ ನೀವು ಯಶಸ್ವಿಯಾಗಬಹುದು. ಹಿಂದೆ ತಮ್ಮ ಹಣವನ್ನು ಹೂಡಿಕೆ ಮಾಡಿದ ಜನರು ಇಂದು ಆ ಹಣದಿಂದ ಲಾಭ ಪಡೆಯುವ ಸಾಧ್ಯತೆಯಿದೆ. ನೀವು ಒಬ್ಬಂಟಿಯೆನಿಸಿದಾಗ ನಿಮ್ಮ ಕುಟುಂಬದ ಸಹಾಯ ತೆಗೆದುಕೊಳ್ಳಿ.

**ಕುಂಭ** ನಿಮ್ಮ ಒರಟು ವರ್ತನೆ ನಿಮ್ಮ ಸ್ನೇಹಿತರಿಗೆ ಸ್ವಲ್ಪ ಸಮಸ್ಯೆ ಉಂಟುಮಾಡಬಹುದು. ನಿಮ್ಮ ತಾಯಿಯ ದುಂದುಗಾರಿಕೆಯನ್ನು ನೋಡಿ ನೀವು ಚಿಂತಿತರಾಗಬಹುದು ಆದ್ದರಿಂದ ನೀವು ಅವರ ಕೋಪದ ಬೇಟೆಯಾಗಬಹದು. ಮಕ್ಕಳೊಂದಿಗೆ ಸಮಯ ಕಳೆಯುವುದು ಮುಖ್ಯ. ಪ್ರಣಯ ಸಂತೋಷಕರವೂ ಮತ್ತು ಅದ್ಭುತವೂ ಆಗಬಹುದು.

**ಮೀನ** ನೀವು ಸಾಮಾನ್ಯವಾಗಿ ಇರುವುದಕ್ಕಿಂತ ಕಡಿಮೆ ಚೈತನ್ಯವನ್ನು ಇಂದು ಕಾಣುತ್ತೀರಿ ನಿಮ್ಮ ಮೇಲೆ ನೀವೇ ಹೆಚ್ಚುವರಿ ಕೆಲಸಕ್ಕೆ ಒತ್ತಡ ಹೇರಬೇಡಿ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ ಮತ್ತು ನಿಮ್ಮ ಕೆಲಸಗಳನ್ನು ಇನ್ನೊಂದು ದಿನಕ್ಕೆ ವರ್ಗಾಯಿಸಿ. ಹಿಂದಿನ ಬಂಡವಾಳದಿಂದ ಆದಾಯವನ್ನು ನಿರೀಕ್ಷಿಸಿದ್ದಲ್ಲಿ.

# ರೈಲ್ವೆ ಹಳಿ ಮೇಲೆ ಗುಡ್ಡ ಕುಸಿತ; ರೈಲು ಸಂಚಾರ ಸಂಪೂರ್ಣ ಸ್ಥಗಿತ

• **ಉದಯವಾಹಿನಿ, ಹಾಸನ:**

ಜಿಲ್ಲೆಯ ಮಲೆನಾಡು ಭಾಗದಲ್ಲಿ ಮಳೆಯ ಅಬ್ಬರ ಮುಂದುವರೆದಿದ್ದು, ಯಡಕುಮರಿ ಬಳಿ ರೈಲ್ವೆ ಹಳಿ ಮೇಲೆ ಗುಡ್ಡ ಕುಸಿದ ಪರಿಣಾಮ ಬೆಂಗಳೂರು–ಮಂಗಳೂರು ಮಾರ್ಗದ ರೈಲು ಸಂಚಾರ ಸಂಪೂರ್ಣ ಸ್ಥಗಿತಗೊಂಡಿದೆ.ಘಟನಾ ಸ್ಥಳಕ್ಕೆ ಆಗಮಿಸಿರುವ ರೈಲ್ವೆ ಇಲಾಖೆ ಸಿಬ್ಬಂದಿ ಗುಡ್ಡ ತೆರವು ಕಾಮಗಾರಿಯನ್ನು ಭರದಿಂದ ನಡೆಸುತ್ತಿದ್ದಾರೆ. ಆದರೆ, ಸಂಚಾರ ರದ್ದತಿಯಿಂದಾಗಿ ಪ್ರಯಾಣಿಕರು ತೀವ್ರ ಪರದಾಟ ನಡೆಸುವಂತಾಗಿದೆ. ಬೆಂಗಳೂರು–ಮುರಡೇಶ್ವರ, ಬೆಂಗಳೂರು–ಕೋಜಿಕೋಡ್, ವಿಜಯಪುರ–ಮಂಗಳೂರು ರೈಲುಗಳು ಹಾಸನದಲ್ಲಿ ನಿಲುಗಡೆ. ಬೆಂಗಳೂರು–ಕಾರವಾರ ಎಕ್ಸ್‌ಪ್ರೆಸ್ ರೈಲು ಸಕಲೇಶಪುರದಲ್ಲಿ ನಿಲುಗಡೆ.ಮುರಡೇಶ್ವರ–ಬೆಂಗಳೂರು, ಮಂಗಳೂರು–ವಿಜಯಪುರ ರೈಲುಗಳು ಸುಬ್ರಹ್ಮಣ್ಯದಲ್ಲಿ ನಿಲುಗಡೆ.ಕೋಜಿಕೋಡ್ ಬೆಂಗಳೂರು ರೈಲು ಪುತ್ತೂರಿನಲ್ಲಿ ನಿಲುಗಡೆ. ಪ್ರಯಾಣಿಕರಿಗೆ ರೈಲು ರದ್ದತಿ ಬಗ್ಗೆ ಇಲಾಖೆಯಿಂದ ಮಾಹಿತಿ ನೀಡಲಾಗಿದೆ.ರೈಲು ಸಂಚಾರ ರದ್ದತಿಯ ಕುರಿತು ಇಲಾಖೆಯು ಪ್ರಯಾಣಿಕರಿಗೆ ಮಾಹಿತಿ ನೀಡಿದ್ದು, ನಿನ್ನೆ ರಾತ್ರಿಯಿಂದಲೇ ಕಾಯುತ್ತಿದ್ದ ಹಲವು ಪ್ರಯಾಣಿಕರು ನಡುರಾತ್ರಿಯಲ್ಲಿ ಪರ್ಯಾಯವಾಗಿ ಬಸ್ ಮತ್ತು ಕಾರುಗಳ ವ್ಯವಸ್ಥೆ ಮಾಡಿಕೊಂಡು ಪ್ರಯಾಣ ಬೆಳೆಸಿದ್ದಾರೆ. ಇನ್ನು ಸುರಕ್ಷತೆಯ ದೃಷ್ಟಿಯಿಂದ ಇಂದು ಈ ಮಾರ್ಗದಲ್ಲಿ ಸಂಚರಿಸುವ ಎಲ್ಲಾ ರೈಲುಗಳ ಸಂಚಾರವನ್ನು ಸಂಪೂರ್ಣವಾಗಿ ಬಂದ್ ಮಾಡಲಾಗಿದೆ. ರೈಲಿನಲ್ಲಿ ಕಾನ್ಸ್‌ಟೇಬಲ್ ಪರೀಕ್ಷೆಗೆ ತೆರಳುತ್ತಿದ್ದ ಪರೀಕ್ಷಾರ್ಥಿಗಳು ಪರದಾಡುತ್ತಿದ್ದಾರೆ. ಅಲ್ಲದೇ ನಡುರಾತ್ರಿ ಪ್ರಯಾಣಕ್ಕೆ ಪರ್ಯಾಯ ಮಾರ್ಗ ಹುಡುಕಲು ಪ್ರಯಾಣಿಕರು ಪರದಾಡಿದ್ದಾರೆ.

# ಗುಡ್ಡ ಕುಸಿತದಿಂದ ಒಂದೇ ಕುಟುಂಬದ ಮೂವರು ದುರ್ಮರಣ

• **ಉದಯವಾಹಿನಿ, ಶಿವಮೊಗ್ಗ :**

ರಾಜ್ಯದಲ್ಲಿ ವರುಣಾರ್ಭಟ ಜೋರಾಗಿದ್ದು, ಶಿವಮೊಗ್ಗ ಜಿಲ್ಲೆಯಲ್ಲಿ ನಿರಂತರ ಮಳೆಗೆ ಭಾರೀ ಅವಘಡ ಸಂಭವಿಸಿದೆ. ತೀರ್ಥಹಳ್ಳಿಯ ಇಂದಿರಾ ನಗರದಲ್ಲಿ ಗುಡ್ಡ ಕುಸಿದು ಒಂದೇ ಕುಟುಂಬದ ಮೂವರು ಸಾವನ್ನಪ್ಪಿದ್ದಾರೆ.

ತಡರಾತ್ರಿ 2:30 ವೇಳೆಯಲ್ಲಿ ಮಳೆಯ ಅಬ್ಬರ ಹೆಚ್ಚಾಗಿ ಗುಡ್ಡ ಕುಸಿದಿದೆ. ಕೊಕ್ಕರೆಗಾರು ಗ್ರಾಮ ಗಂಗಾವತಿ ತಾಲೂಕು ಕೊಪ್ಪಳ ಜಿಲ್ಲೆಯವರಾಗಿದ್ದು, ಮಲ್ಲಿಕಾರ್ಜುನ (35) ನಾಗವೇಣಿ (28 ), ಹಾಗೂ ಮೂರು ವರ್ಷದ ಸಂತೋಷ ಎಂದು ಗುರುತಿಸಲಾಗಿದೆ. ಇವರೆಲ್ಲ ಮಲಗಿದ್ದಾಗ ರಾತ್ರಿ ಮನೆ ಮೇಲೆ ಗುಡ್ಡ ಕುಸಿದಿದೆ. ಮಣ್ಣಿನಡಿ ಮೃತದೇಹಗಳು ಸಿಲುಕಿವೆ. ಜೆಸಿಬಿ ಬಳಸಿ ತೆರವು ಕಾರ್ಯಾಚರಣೆ ನಡೆಯುತ್ತಿದೆ. ತೆರವು ಕಾರ್ಯಕ್ಕೆ ಮಳೆಯಿಂದ ಕಷ್ಟವಾಗುತ್ತಿದೆ. ಸ್ಥಳಕ್ಕೆ ಪೊಲೀಸ್ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ. ತೀರ್ಥಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

## ಬಸ್‌ಗಳ ಮುಖಾಮುಖಿ ಡಿಕ್ಕಿ: ಇಬ್ಬರು ಚಾಲಕರು ಸಾವು

• **ಉದಯವಾಹಿನಿ, ಕಲಬುರಗಿ,**

ಐರಾವತ ಬಸ್ ಹಾಗೂ ಕೆಎಸ್‌ಆರ್‌ಟಿಸಿ ಬಸ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಇಬ್ಬರು ಚಾಲಕರು ಮೃತಪಟ್ಟಿರುವ ದಾರುಣ ಘಟನೆ ಕಮಲಾಪುರ ತಾಲೂಕಿನ ಡೊಂಗರಗಾಂವ ಕ್ರಾಸ್ ಸಮೀಪ ಶನಿವಾರ ಸಂಜೆ ನಡೆದಿದೆ.ಮೃತರನ್ನು ಕೆಎಸ್ ಆರ್ಟಿಸಿ ಬಸ್ ಚಾಲಕ ತುಕಾರಾಮ ಹಾಗೂ ಐರಾವತ ಬಸ್ ಚಾಲಕ ಶಿವಾನಂದ ರೆಡ್ಡಿ ಎಂದು ಗುರುತಿಸಲಾಗಿದೆ.ಬೀದರ್ನಿಂದ ದಾವಣಗೆರೆ ಕಡೆಗೆ ತೆರಳುತ್ತಿದ್ದ ಐರಾವತ ಬಸ್ ಹಾಗೂ ಕಲಬುರಗಿಯಿಂದ ಬೀದರ್ ಕಡೆಗೆ ಸಾಗುತ್ತಿದ್ದ ಕೆಎಸ್‌ಆರ್ಟಿಸಿ ಬಸ್ ಮುಖಾಮುಖಿ ಡಿಕ್ಕಿಯಾಗಿವೆ.

ಡಿಕ್ಕಿಯ ತೀವ್ರತೆಗೆ ಒಬ್ಬ ಚಾಲಕ ಸ್ಥಳದಲ್ಲೇ ಮೃತಪಟ್ಟರೆ, ಗಂಭೀರವಾಗಿ ಗಾಯಗೊಂಡಿದ್ದ ಇನ್ನೋರ್ವ ಚಾಲಕ ಆಸ್ಪತ್ರೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಅಪಘಾತದಲ್ಲಿ 10ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದು, ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಕುರಿತು ಕಮಲಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕೆಂಭಾವಿ ಮೊರಾರ್ಜಿ ಶಾಲೆಯ ವಿದ್ಯಾರ್ಥಿಗಳ ಕ್ರೀಡಾ ಸಾಧನೆ: ತಾಲ್ಲೂಕು ಮಟ್ಟಕ್ಕೆ ಆಯ್ಕೆ

• **ಉದಯವಾಹಿನಿ, ಕೆಂಭಾವಿ:**

ಸ್ಥಳೀಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿಗಳು ಇತ್ತೀಚೆಗೆ ನಡೆದ ಪ್ರಾಥಮಿಕ ಶಾಲಾ ಕ್ರೀಡಾಕೂಟದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ವಿವಿಧ ವಿಭಾಗಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆಯುವ ಮೂಲಕ ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ತಂಡದ ಸ್ಪರ್ಧೆಗಳಲ್ಲಿ ಶಾಲೆಯ ಪ್ರಾಥಮಿಕ ವಿಭಾಗದ ಬಾಲಕರ ವಾಲಿಬಾಲ್ ತಂಡ ಹಾಗೂ ಬಾಲಕಿಯರ ಥ್ರೋಬಾಲ್ ತಂಡಗಳು ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಅರ್ಹತೆ ಗಿಟ್ಟಿಸಿಕೊಂಡಿವೆ.

ಇನ್ನು ವೈಯಕ್ತಿಕ ವಿಭಾಗದಲ್ಲೂ ವಿದ್ಯಾರ್ಥಿಗಳು ಅಭೂತಪೂರ್ವ ಸಾಧನೆ



ಉದಯವಾಹಿನಿ ಚಿತ್ರ

ಮಾಡಿದ್ದು, ಕ್ರೀಡಾಪಟುಗಳಾದ ನಂದೇಶ್ (ಉದ್ದ ಜಿಗಿತ), ರೇವಣಸಿದ್ದ (100 ಮೀ. ಓಟ), ಈಶ್ವರಿ (ಗುಂಡು ಎಸೆತ) ಹಾಗೂ ಶ್ರೇಯ (100 ಮೀ. ಮತ್ತು 200 ಮೀ. ಓಟ) ಪ್ರಥಮ ಸ್ಥಾನ ಪಡೆದಿದ್ದಾರೆ. ಹಾಗೆಯೇ ಪ್ರವೀಣ ಎತ್ತರ ಜಿಗಿತದಲ್ಲಿ ದ್ವಿತೀಯ ಸ್ಥಾನ ಗಳಿಸಿ ತಾಲೂಕು ಮಟ್ಟದ ಸ್ಪರ್ಧೆಗೆ ಅರ್ಹತೆ ಪಡೆದಿದ್ದಾರೆ.

ಕ್ರೀಡಾಕೂಟದಲ್ಲಿ ಉತ್ತಮ ಪ್ರದರ್ಶನ ನೀಡಿ ಶಾಲೆಗೆ ಕೀರ್ತಿ ತಂದ ವಿದ್ಯಾರ್ಥಿಗಳ ಸಾಧನೆಗೆ ಶಾಲೆಯ ಪ್ರಾಂಶುಪಾಲರಾದ ಬಸ್ಸಮ್ಮ ಪಾಟೀಲ್, ದೈಹಿಕ ಶಿಕ್ಷಕರಾದ ಮಡಿವಾಳಪ್ಪ ಎಸ್. ಪಾಟೀಲ್ ಹಾಗೂ ಶಾಲೆಯ ಸಮಸ್ತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿ ಮುಂದಿನ ಸ್ಪರ್ಧೆಗಳಿಗೆ ಶುಭ ಹಾರೈಸಿದ್ದಾರೆ.

# ಸಂಘಟಿತ ಪ್ರಯತ್ನದಿಂದ ಓದುವ ಹವ್ಯಾಸ ಬೆಳೆಸಿಕೊಳ್ಳಬಹುದು

## ಪುಸ್ತಕ ಓದುವುದರಿಂದ ನಮ್ಮ ಕಲ್ಪನೆಯ ಪರಿಧಿ ವಿಸ್ತಾರವಾಗುತ್ತದೆ. ಚಿಂತನ–ಮಂಥನ ಬೆಳೆಯುತ್ತದೆ.

• **ಉದಯವಾಹಿನಿ, ಉಜಿರೆ:**

ಅಹಂ ಮತ್ತು ಕೀಳರಿಮೆ ತೊರೆದು ಇತರರಲ್ಲಿರುವ ಒಳ್ಳೆಯ ಗುಣಗಳನ್ನು ಗುರುತಿಸಿ ಗೌರವಿಸಬೇಕು. ಸಣ್ಣ ಸಣ್ಣ ಸತ್ಕಾರ್ಯಗಳನ್ನು ಮಾಡಿದರೂ ಸಾರ್ಥಕ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ಕೊಪ್ಪ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕಿ ಹಾಗೂ ಅಂಕಣ ಬರಹಗಾರ್ತಿ ದೀಪಾ ಹಿರೇಗುತ್ತಿ ಹೇಳಿದರು.

ಅವರು ಧರ್ಮಸ್ಥಳದಲ್ಲಿ ಅಮೃತವರ್ಷಿಣಿ ಸಭಾಭವನದಲ್ಲಿ ಶಾಂತಿವನ ಟ್ರಸ್ಟ್ ವತಿಯಿಂದ ಪ್ರಕಟಿಸಲಾದ ''ಜ್ಞಾನ ಚಂದನ'' ಮತ್ತು ''ಜ್ಞಾನ ನಂದನ'' ಕೃತಿಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

1 : ಭಾರತದ ಸೌಂದರ್ಯ ಆಗಿದೆ
2 : ಓದುವ ಹವ್ಯಾಸ ಬೆಳೆಸುವ
3 : ಶಿಕ್ಷಣದ ಮೂಲಕ ಆದರ್ಶ

ಪುಸ್ತಕ ಓದುವುದರಿಂದ ನಮ್ಮ ಕಲ್ಪನೆಯ ಪರಿಧಿ ವಿಸ್ತಾರವಾಗುತ್ತದೆ. ಚಿಂತನ–ಮಂಥನ ಬೆಳೆಯುತ್ತದೆ. ಪ್ರತಿಯೊಬ್ಬರಲ್ಲಿಯೂ ಸುಪ್ತ ಪ್ರತಿಭೆ, ಬುದ್ಧಿವಂತಿಕೆ, ಕೌಶಲ ಇರುತ್ತದೆ. ಯಾರೂ ಮೇಲಲ್ಲ, ಯಾರೂ ಕೀಳಲ್ಲ. ಶಿಕ್ಷಕರು, ರಕ್ಷಕರು ಮತ್ತು ಮಕ್ಕಳ ಸಂಘಟಿತ ಪ್ರಯತ್ನದಿಂದ ಎಲ್ಲರೂ ಓದುವ ಹವ್ಯಾಸ ಬೆಳೆಸಿಕೊಳ್ಳಬಹುದು.

ಉದಯವಾಹಿನಿ ಚಿತ್ರ



> ಪ್ರತಿಯೊಬ್ಬರಲ್ಲಿಯೂ ಸುಪ್ತ ಪ್ರತಿಭೆ ಇದ್ದು, ಗುರು–ಹಿರಿಯರ ಮಾರ್ಗದರ್ಶನದಲ್ಲಿ ಶಿಕ್ಷಣದ ಮೂಲಕ ಆದರ್ಶ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಪುಸ್ತಕ ಓದುವ ಹವ್ಯಾಸ, ಚಿತ್ರಕಲೆ, ಪ್ರಕೃತಿ–ಪರಿಸರ ವೀಕ್ಷಣೆ ಮೊದಲಾದ ಹವ್ಯಾಸಗಳನ್ನು ಬೆಳೆಸಿಕೊಂಡಾಗ ಉನ್ನತ ಸಾಧನೆ ಮಾಡಬಹುದು ಎಂದು ಹೇಳಿದರು. –ಡಿ. ವೀರೇಂದ್ರ ಹೆಗ್ಗಡೆ

ಆದರೆ, ಇಂದು ಕಂಪ್ಯೂಟರ್, ಮೊಬೈಲ್ ಫೋನ್ ಬಳಕೆ ಹಾಗೂ ಸಾಮಾಜಿಕ ಜಾಲತಾಣಗಳ ಮೋಹದ ಜಾಲದ ಪ್ರಭಾವದಿಂದ ಎಲ್ಲರೂ ಭಾವನಾರಹಿತವಾಗಿ, ಮಾನವೀಯತೆ ಕಳೆದುಕೊಂಡು ಯಂತ್ರಮಾನವರಾಗುತ್ತಿರುವುದು ಖೇದಕರವಾಗಿದೆ ಎಂದರು.

ನೈತಿಕ ಮೌಲ್ಯಗಳನ್ನು ಉದ್ದೀಪನಗೊಳಿಸುವ ಲಕ್ಷಾಂತರ ಪುಸ್ತಕಗಳನ್ನು ಪ್ರತಿವರ್ಷ ಪ್ರಕಟಿಸಿ, ಶಾಲೆಗಳಲ್ಲಿ ವಿತರಿಸಿ, ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ ಬೆಳೆಸುವ ಪೂಜ್ಯ ಡಿ. ವೀರೇಂದ್ರ ಹೆಗ್ಗಡೆಯವರ ಸೇವೆ ಶ್ಲಾಘನೀಯವಾಗಿದೆ ಎಂದು ಹೇಳಿ ಅಭಿನಂದಿಸಿದರು.

ಅಂಚೆ–ಕುಂಚ ಸ್ಪರ್ಧೆಗಳ ವಿಜೇತರಿಗೆ ಪುರಸ್ಕಾರ ವಿತರಿಸಿದ ಚಲನಚಿತ್ರ ನಟ ಅಭಿಜಿತ್ ಮಾತನಾಡಿ, ಪುಸ್ತಕಗಳನ್ನು ಓದಿ ವಿದ್ಯೆ ಮತ್ತು ಬುದ್ಧಿಯನ್ನು ಬೆಳೆಸಿಕೊಂಡಾಗ ನಾವು ವಿವೇಕವುಳ್ಳ ಆದರ್ಶ ವ್ಯಕ್ತಿಗಳಾಗಿ ಉತ್ತಮ ಸಾಧನೆ ಮಾಡಬಹುದು. ಜಗತ್ತಿನಲ್ಲಿ ಒಳ್ಳೆದು, ಕೆಟ್ಟದ್ದು ಎರಡೂ ಇರುತ್ತವೆ. ನಮ್ಮ ಮನಸ್ಸಿನ ನಿಯಂತ್ರಣದೊಂದಿಗೆ ಹಂಸಕ್ಷೀರ ನ್ಯಾಯದಂತೆ ಒಳ್ಳೆಯದನ್ನು ಮಾತ್ರ ಸ್ವೀಕರಿಸಿ ಕೆಟ್ಟದ್ದನ್ನು ಕಡೆಗಣಿಸಬೇಕು ಎಂದು ಅವರು ಸಲಹೆ ನೀಡಿದರು.

ಎಸ್.ಡಿ.ಎಂ. ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಿ. ಹರ್ಷೇಂದ್ರ ಕುಮಾರ್, ಬೆಂಗಳೂರಿನಲ್ಲಿರುವ ಕ್ಷೇಮವನದ ಸಿ.ಇ.ಒ. ಶ್ರದ್ಧಾ ಅಮಿತ್, ಶಾಂತಿವನ ಟ್ರಸ್ಟ್ ಕಾರ್ಯದರ್ಶಿ ಜಗನ್ನಾಥ್ ಮತ್ತು ಬೆಳ್ತಂಗಡಿ ಕ್ಷೇತ್ರ ಶಿಕ್ಷಣಾಧಿಕಾರಿ ರಾಜಶ್ರೀ ಉಪಸ್ಥಿತರಿದ್ದರು. ಯೋಗ ಮತ್ತು ನೈತಿಕ ಶಿಕ್ಷಣ ಯೋಜನೆಯ ನಿರ್ದೇಶಕ ಡಾ. ಶಶಿಕಾಂತ ಜೈನ್ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದರು. ಶಿಕ್ಷಕ ಶೇಖರ್ ಕಡ್ತಲ ಧನ್ಯವಾದವಿತ್ತರು. ಪುದುವೆಟ್ಟು ಶಾಲಾ ಶಿಕ್ಷಕ ನಿಶಾಂತ್ ಕಾರ್ಯಕ್ರಮ ನಿರ್ವಹಿಸಿದರು

### ಉನ್ನತ ಸೇವೆ–ಸಾಧನೆ

ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿರುವುದು ಭಾರತದ ಸೌಂದರ್ಯ ಆಗಿದೆ. ಬದುಕಿನಲ್ಲಿ ಬರುವ ನೋವು, ಸಂಕಟ, ದುಃಖ–ದುಮ್ಮಾನಗಳು ಹಾಗೂ ದೈಹಿಕ ಮತ್ತು ಮಾನಸಿಕ ಆಘಾತಗಳನ್ನು ಸಾಧನೆಗೆ ಕಚ್ಚಾವಸ್ತುಗಳನ್ನಾಗಿ ಬಳಸಿ ಉನ್ನತ ಸೇವೆ–ಸಾಧನೆ ಮಾಡಬಹುದು.

## ಸೇವೆಯೇ ಪೂಜೆ ಎಂದು ಭಾವಿಸಿ ದುಡಿದಾಗ ಮಾತ್ರ ವೃತ್ತಿಗೆ ಸಾರ್ಥಕತೆ

• **ಉದಯವಾಹಿನಿ, ಕೆಂಭಾವಿ**

ಶಿಕ್ಷಕ ವೃತ್ತಿ ಎನ್ನುವುದು ಕೇವಲ ಜೀವನೋಪಾಯದ ಮಾರ್ಗವಲ್ಲ; ಅದು ಸಮಾಜ ನಿರ್ಮಾಣದ ಪವಿತ್ರ ಜವಾಬ್ದಾರಿ. ನನ್ನ ಸುದೀರ್ಘ ವೃತ್ತಿಜೀವನದಲ್ಲಿ ಪ್ರೀತಿಯ ವಿದ್ಯಾರ್ಥಿಗಳಿಗೆ ಜ್ಞಾನ ಧಾರೆ ಎರೆಯಲು ಮತ್ತು ಶಾಲೆಯ ಏಳಿಗೆಗೆ ಪ್ರಾಮಾಣಿಕವಾಗಿ ಶ್ರಮಿಸಿದ ತೃಪ್ತಿ ನನಗಿದೆ. ರಾಂಪೂರ ಗ್ರಾಮಸ್ಥರ, ಸಹೋದ್ಯೋಗಿಗಳ ಮತ್ತು ವಿದ್ಯಾರ್ಥಿಗಳ ಪ್ರೀತಿ ಹಾಗೂ ಸಹಕಾರವೇ ನನ್ನ ಸೇವಾ ಜೀವನದ ದೊಡ್ಡ ಆಸ್ತಿ ಎಂದು ನಿಕಟಪೂರ್ವ ಮುಖ್ಯಗುರುಗಳಾದ ಶ್ರೀ ಶ್ರೀಶೈಲ ಬಿ. ಹದಗಲ್ ಅವರು ನುಡಿದರು.

ಸ್ಥಳೀಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತಮ್ಮ ವಯೋ ನಿವೃತ್ತಿಯ ಅಂಗವಾಗಿ ಏರ್ಪಡಿಸಲಾಗಿದ್ದ ಆತ್ಮೀಯ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ, ಅತ್ಯಂತ ಭಾವನಾತ್ಮಕವಾಗಿ ಅವರು ಮಾತನಾಡುತ್ತಿದ್ದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಪ್ರಸಿದ್ಧ ಸಾಹಿತಿ ನಿಂಗನಗೌಡ ದೇಸಾಯಿ ಅವರು, ಶ್ರೀಶೈಲ ಬಿ. ಹದಗಲ್ ಅವರು ಕೇವಲ ಪಠ್ಯ ಬೋಧನೆಗಷ್ಟೇ ಸೀಮಿತವಾಗದೆ, ಮಕ್ಕಳಲ್ಲಿ ಉತ್ತಮ ಸಂಸ್ಕಾರ, ಶಿಸ್ತು ಮತ್ತು

ಉದಯವಾಹಿನಿ ಚಿತ್ರ


ಮಾನವೀಯ ಮೌಲ್ಯಗಳನ್ನು ಬಿತ್ತಿದವರು. ಶಾಲೆಯ ಭೌತಿಕ ಹಾಗೂ ಶೈಕ್ಷಣಿಕ ಪ್ರಗತಿಗೆ ಅವರು ನೀಡಿದ ಕೊಡುಗೆ ಅತ್ಯಂತ ಶ್ಲಾಘನೀಯವಾದದ್ದು. ಅವರ ನಿಷ್ಠಾವಂತ ಸೇವೆಯನ್ನು ರಾಂಪೂರ ಗ್ರಾಮ ಮತ್ತು ಶಿಕ್ಷಣ ಕ್ಷೇತ್ರ ಎಂದಿಗೂ ಸ್ಮರಿಸುತ್ತದೆ ಎಂದು ಮುಕ್ತಕಂಠದಿಂದ ಶ್ಲಾಘಿಸಿದರು.

ಸಮಾರಂಭದಲ್ಲಿ ಶಾಲೆಯ ಸಹ–ಶಿಕ್ಷಕ ವೃಂದ, ಎಸ್‌ಡಿಎಮ್‌ಸಿ ಅಧ್ಯಕ್ಷರು ಹಾಗೂ ಸದಸ್ಯರು, ಹಳೆ ವಿದ್ಯಾರ್ಥಿಗಳು, ಗ್ರಾಮದ ಹಿರಿಯರು ಮತ್ತು ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದು, ಶ್ರೀಶೈಲ ಹದಗಲ್ ಅವರಿಗೆ ಆತ್ಮೀಯವಾಗಿ ಬೀಳ್ಕೊಟ್ಟರು.

## ಮಕ್ಕಳ ಹಕ್ಕುಗಳ ರಕ್ಷಣಾ ನೀತಿ ಅನುಷ್ಠಾನ ಮಾಡಿ : ಹಲಮಡಗಿ

• **ಉದಯವಾಹಿನಿ, ಔರಾದ್ :**

ಎಲ್ಲ ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಯಾಗಬೇಕು ಮತ್ತು ಮಕ್ಕಳ ರಕ್ಷಣಾ ನೀತಿ 2016ರ ಕಡ್ಡಾಯವಾಗಿ ಅನುಷ್ಠಾನ ಮಾಡುವಂತೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಸದಸ್ಯ ಜಗನ್ನಾಥ ಹಲಮಡಗಿ ಹೇಳಿದರು.

ತಾಪಂ ನಲ್ಲಿ ನಡೆದ ತಾಲೂಕು ಮಟ್ಟದ ಮಕ್ಕಳ ರಕ್ಷಣಾ ವ್ಯವಸ್ಥೆ ಹಾಗು ವಿವಿಧ ಇಲಾಖೆಗಳ ತಾಲೂಕು ಅಧಿಕಾರಿಗಳ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಎಲ್ಲ ನರ್ಸರಿ ಮತ್ತು ಪೂರ್ವ ಪ್ರಾಥಮಿಕ ಶಾಲೆಗಳು ಸರ್ಕಾರದ ನಿಯಾಮವಳಿ ಪ್ರಕಾರ ನೊಂದಣೆಯಾಗಬೇಕು. ಅನಧಿಕೃತ ಕೊಚಿಂಗ್ ಸೇಂಟರ್ ಗಳನ್ನು ಮುಚ್ಚಿಸಬೇಕು ಎಂದು ಬಿಇಒ ಅವರಿಗೆ ತಿಳಿಸಿದರು.

ತಾಲೂಕಿನಲ್ಲಿ ಕಡ್ಡಾಯವಾಗಿ ಎರಡು ಸಲ ಬಾಲಕಾರ್ಮಿಕ ಮಕ್ಕಳ ರಕ್ಷಣೆ ಕಾರ್ಯಚರಣೆ ಮತ್ತು ಚಿಂದಿ ಆಯುವ ಮಕ್ಕಳ ರಕ್ಷಣೆ ಕಾರ್ಯಚರಣೆ ಮಾಡುವಂತೆ ಕಾರ್ಮಿಕ ನಿರೀಕ್ಷಕರಿಗೆ ತಿಳಿಸಿದರು. ತಾಲೂಕಿನ ಹಿಂದೂಳಿದ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ



ಉದಯವಾಹಿನಿ ಚಿತ್ರ

ಕಲ್ಯಾಣ ಇಲಾಖೆ ಅಡಿಯಲ್ಲಿ ನಡೆಯುತ್ತಿರುವ ವಸತಿ ಶಾಲೆಗಳ ಮಕ್ಕಳ ಮೂಲ ಸೌಕರ್ಯಗಳನ್ನು ದೊರಕಿಸಿಕೊಡಬೇಕು ಎಂದು ಸಂಬಂಧಿತ ಅಧಿಕಾರಿಗಳಿಗೆ ಸೂಚಿಸಿದರು.

ಹಿಂದೂಳಿದ ವರ್ಗಗಳ ಕಲ್ಯಾಣ ಇಲಾಖೆ ಅಡಿಯಲ್ಲಿ ನಡೆಯುತ್ತಿರುವ ಬಾಲಕಿಯರ ವಸತಿ ನಿಲಯಕ್ಕೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆ ಬಗ್ಗೆ ಪರಿಶೀಲನೆ ಮಾಡಿ, ಕೆಲವು ಸೂಚನೆಗಳನ್ನು ನೀಡಿದರು.

# ಚಿಂಚೋಳಿಯಲ್ಲಿ 33831 ಮತದಾರರು ಡಿಲೀಟ್ ಆಗುವ ಸಾಧ್ಯತೆ: ತಹಶೀಲ್ದಾರ್ ಜಮಖಂಡಿ

• **ಉದಯವಾಹಿನಿ,ಚಿಂಚೋಳಿ**

ತಾಲ್ಲೂಕಿನಾದ್ಯಂತ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯಲ್ಲಿ 2,18,160 ಅರ್ಹ ಮತದಾರರಲ್ಲಿ 33,831 ಮತದಾರರು ಡಿಲೀಟ್ ಆಗುವ ಸಾಧ್ಯತೆಯಿದೆ ಹಾಗಾಗಿ ಅ.8ರವರೆಗೆ ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಳಿಸಲು ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ತಹಸೀಲ್ದಾರ್ ಸುಬ್ಬಣ್ಣ ಜಮಖಂಡಿ ತಿಳಿಸಿದ್ದಾರೆ.

ಪಟ್ಟಣದ ಪ್ರಜಾಸೌಧ ಸಭಾಂಗಣದಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ಈಗಾಗಲೇ ಕೇಂದ್ರ ಮತ್ತು ರಾಜ್ಯ ಚುನಾವಣಾ ಆಯೋಗದ ಆದೇಶ ಅನುಸಾರವಾಗಿ ಎಸ್‌ಐಆರ್ ಎನಿಮೇಷನ್ ಫಾರಂ ಶೇಕಡಾ 100ರಷ್ಟು ಹಂಚಿಕೆ ಮಾಡಲಾಗಿದೆ ಆದರೆ ತಾಲ್ಲೂಕಿನಲ್ಲಿ 1,84,329 ಮತದಾರರು ಡಿಜಿಟೆಡ್ ಆಗಿವೆ,33831ಮತದಾರರು ಸ್ಥಳಾಂತರ,ಮರಣ, ಲಭ್ಯವಿಲ್ಲದಿರುವುದು,ನಾನಾ ರೀತಿಯಿಂದ ಡಿಜಿಟೆಡ್

ಎಸ್‌ಐಆರ್ ಪ್ರಕ್ರಿಯೆ ಪೂರ್ಣಕ್ಕೆ ವಿಶೇಷ ಅಭಿಯಾನ


ಉದಯವಾಹಿನಿ ಚಿತ್ರ

ಆಗಿಲ್ಲ ಹಾಗಾಗಿ ಡಿಲೀಟ್ ಆಗುವ ಸಾಧ್ಯತೆಯಿದೆ.

ಅ.1ರಿಂದಲ್ಲೇ ತಾಲ್ಲೂಕಾಡಳಿತ ಮತ್ತು ಬಿಎಲ್‌ಒಗಳು,ಮೇಲ್ವಾಚಾರಕರು,ನೋಡಲ್ ಅಧಿಕಾರಿಗಳು,ಬಿಎಲ್‌ಎ2ಗಳು ಮತ್ತು ರಾಜಕೀಯ ಮುಖಂಡರ ಸಮ್ಮುಖದಲ್ಲಿ ಆಯಾ ಗ್ರಾಮಗಳ ಭೂತಗಳಲ್ಲಿ,ವಾರ್ಡ್ ಗಳಲ್ಲಿ,ಗುಡಿ ಗೋಪೂರಗಳಲ್ಲಿ,ಮಸೀದಿ ಗಳಲ್ಲಿ ಪ್ರಚಾರ ಮಾಡುವುದು,ಗ್ರಾಮ ಸಭೆ ಮಾಡುವುದು,ವಿವಿಧೆಡೆ ಮತದಾರರು ಡಿಜಿಟಡ್ ಆಗಿಲ್ಲ,ತಪ್ಪಿ ಹೋಗುವ ಮತದಾರರಿಗೆ ವಿಶೇಷ ಅಭಿಯಾನ ಮಾಡುವ ಮೂಲಕ ಅಂಥವರನ್ನು ಗುರುತಿಸಿ ಸೇರ್ಪಡೆ ಮಾಡುವ ಕೆಲಸ ಮಾಡಲಾಗುವುದು ಎಂದರು.

ಚುನಾವಣಾ ಆಯೋಗದ ಆದೇಶದಂತೆ ನಾವು ಕೆಲಸ ಮಾಡುತ್ತಿದ್ದು ಅರ್ಹರನ್ನು ಕೈಬಿಡುವ ಪ್ರಶ್ನೆಯಿಲ್ಲ,ಅಂಥವರನ್ನು ಗುರುತಿಸಿ ಅವಕಾಶದಿಂದ ವಂಚಿತರಾಗದಂತೆ ಸೇರ್ಪಡೆ ಮಾಡುವ ಉದ್ದೇಶವಿದೆ,ಹಾಗಾಗಿ ಯಾರಾದರೂ ಎನಿಮೇಷನ್ ಫಾರಂ ತುಂಬಿಲ್ಲ ಅಂಥವರು ತಹಸೀಲ್ದಾರ್ ಕಛೇರಿಯಾಗಲಿ,ಬಿಎಲ್‌ಒಗಳು,ಬಿಎಲ್‌ಎ2ಗಳಿಗೆ ರಾಜಕೀಯ ಮುಖಂಡರಿಗೆ ಸಂಪರ್ಕಿಸಿ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಲು ಎನಿಮೇಷನ್ ಫಾರಂ ತಪ್ಪದೆ ತುಂಬಿಕೊಡಬೇಕು ಎಂದರು. ಈ ಸಂದರ್ಭದಲ್ಲಿ ಗ್ರೇಡ್2 ತಹಸೀಲ್ದಾರ್ ವೆಂಕಟೇಶ್ ದುಗ್ಗನ,ಶಿರಸ್ತೇದಾರ ವೆಂಕಟೇಶ,ಜೆಡಿಎಸ್ ಅಧ್ಯಕ್ಷ ರವಿಶಂಕರರಡ್ಡಿ ಮುತ್ತಂಗಿ,ಸಂತೋಷ ಗಡಂತಿ,ಹಮಮಂತ ಪೂಜಾರಿ,ನಾಗೇಶ ಗುಣಾಜೀ,ಹಣಮಂತ,ನಾಗೇಶ,ಯಲ್ಲಪ್ಪಾ ಸೇರಿದಂತೆ ಅನೇಕರಿದ್ದರು.

# ಸ್ವ ಉದ್ಯೋಗ ಪ್ರೇರಣ ಶಿಬಿರ: ಮಹಿಳೆಯರು ಸ್ವಾವಲಂಬಿಗಳಾಗಲು ಕರೆ

• **ಉದಯವಾಹಿನಿ, ಬೀದರ್**

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬೀದರ್ ಗ್ರಾಮಾಂತರ ಯೋಜನಾ ಕಚೇರಿ, ಅಮಲಾಪುರ ವಲಯದ ಚೀಟ್ಟಾವಾಡಿ ಕಾರ್ಯಕ್ಷೇತ್ರದ ವತಿಯಿಂದ ಜೈ ಭವಾನಿ ದೇವಸ್ಥಾನದಲ್ಲಿ ಶುಕ್ರವಾರ ಸ್ವ ಉದ್ಯೋಗ ಪ್ರೇರಣ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಸುಮಾರು 60ಕ್ಕೂ ಹೆಚ್ಚು ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ವಿವಿಧ ಸ್ವ ಉದ್ಯೋಗ ಯೋಜನೆಗಳ ಕುರಿತು ಮಾಹಿತಿ ಪಡೆದರು. ಕಾರ್ಯಕ್ರಮವನ್ನು ಯೋಜನಾಧಿಕಾರಿ ಮಯೂರ್, ಪಿಎಸ್‌ಐ ಶ್ರೀಮತಿ ಮಲಮ್ಮ, ಸ್ವ ಉದ್ಯೋಗ ತರಬೇತುದಾರರಾದ ಪ್ರೇಮಾ ಮೇಡಂ, ದೇವಸ್ಥಾನದ ಅರ್ಚಕರು ಹಾಗೂ ಒಕ್ಕೂಟದ ಅಧ್ಯಕ್ಷ ಶಿವಯ್ಯ ಸ್ವಾಮಿ ಶಿವುಮಂಗಲ ಮತ್ತು ಸಮನ್ವಯಾಧಿಕಾರಿ ಜಯಸುಧಾ ಮೇಡಂ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಯೋಜನಾಧಿಕಾರಿ ಮಯೂರ್ ಅವರು ಗ್ರಾಮಾಭಿವೃದ್ಧಿ ಯೋಜನೆಯಡಿ ಲಭ್ಯವಿರುವ ವಿವಿಧ ಸೌಲಭ್ಯಗಳು, ಪ್ರಗತಿ ನಿಧಿ ಪಡೆಯುವ ಸರಳ ವಿಧಾನ, ಸ್ವ ಉದ್ಯೋಗದ ಅವಕಾಶಗಳು, ಉಚಿತ ಹಾಗೂ ವ್ಯವಸ್ಥಿತ ತರಬೇತಿಗಳ ಕುರಿತು ಮಾಹಿತಿ ನೀಡಿದರು. ಮುಂದಿನ ದಿನಗಳಲ್ಲಿ ಗ್ರಾಮ ಮಟ್ಟದಲ್ಲಿಯೇ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ತಿಳಿಸಿ, ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕರೆ ನೀಡಿದರು. ಪಿಎಸ್‌ಐ ಮಲಮ್ಮ ಅವರು ಮಹಿಳೆಯರ ಶಕ್ತಿ, ಗೃಹಿಣಿಯರ

ಉದಯವಾಹಿನಿ ಚಿತ್ರ


ಜವಾಬ್ದಾರಿ ಹಾಗೂ ಮನೆಯಿಂದಲೇ ಸ್ವ ಉದ್ಯೋಗ ಆರಂಭಿಸುವ ಅವಕಾಶಗಳ ಕುರಿತು ಮಾತನಾಡಿದರು.

# ಡ್ರಗ್ಸ್ ಚಟುವಟಿಕೆ ಮಾಹಿತಿ ನೀಡಲು ವಿದ್ಯಾರ್ಥಿಗಳಿಗೆ ಕರೆ

## ದುಶ್ಚಟಗಳ ನಿರ್ಮೂಲನೆಗೆ ಮಹಾಂತ ಶಿವಯೋಗಿಗಳ ಸೇವೆ ಅವಿಸ್ಮರಣೀಯ–ಎಎಸ್‌ಪಿ

• **ಉದಯವಾಹಿನಿ, ಮಂಗಳೂರು**

ಜನರನ್ನು ದುಶ್ಚಟಗಳಿಂದ ಮುಕ್ತಿಗೊಳಿಸಲು ತಮ್ಮ ಜೋಳಿಗೆಯಲ್ಲಿ ದುಶ್ಚಟಗಳನ್ನು ಭಿಕ್ಷೆಯಾಗಿ ಪಡೆದು ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಡಾ.ಮಹಾಂತ ಶಿವಯೋಗಿಗಳು ನೀಡಿದ ಕೊಡುಗೆ

1 : ಅತ್ಯುತ್ತಮ ಕೊಡುಗೆ ನೀಡಬಲ್ಲರು
2 : 'ಬೇಡ' ಎಂಬ ಕಠಿಣ ಸಂಕಲ್ಪ ಮಾಡಿ
3 : ಕ್ಯೂ.ಆರ್ ಕೋಡ್ ಸ್ಕ್ಯಾನ್ ಮೂಲಕ

ಅವಿಸ್ಮರಣೀಯ.

ಅವರು ಸಮಾಜದ ಯುವ ಪೀಳಿಗೆಯನ್ನು ದುಶ್ಚಟಗಳಿಂದ ರಕ್ಷಿಸುವ ಕಡೆಗೆ ಚಿತ್ತ ಹರಿಸಿ ದುಶ್ಚಟಗಳ ಬಗ್ಗೆ ಸತತ ಜಾಗೃತಿ, ಮಾರ್ಗದರ್ಶನ ನೀಡುವ ಮೂಲಕ ಸಮಾಜದ ಸುಧಾರಣೆಗೆ ಪಣತೊಟ್ಟ ಮಹಾನ್ ಚೇತನ ಎಂದು ಹೆಚ್ಚುವರಿ ಪೊಲಿಸ್ ಅಧೀಕ್ಷಕ ಅನಿಲ್ ಕುಮಾರ್ ಭೂಮಾರೆಡ್ಡಿ ಹೇಳಿದರು.

ಅವರು ನಗರದ ಕೆನರಾ ಕಾಲೇಜಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ ಹಾಗೂ ಕೆನರಾ



ಉದಯವಾಹಿನಿ ಚಿತ್ರ

> ವಿದ್ಯಾರ್ಥಿಗಳು ಮಾದಕ ದ್ರವ್ಯ ಮಾರಾಟ ಅಥವಾ ಸೇವಿಸುವವರ ಬಗ್ಗೆ ಮಾಹಿತಿಯನ್ನು ಪೋಲಿಸರಿಗೆ ಅಥವಾ ಶಾಲಾ ಕಾಲೇಜಿನ ಆವರಣದಲ್ಲಿ ಅಳವಡಿಸಿದ ಕ್ಯೂ.ಆರ್ ಕೋಡ್ ಸ್ಕ್ಯಾನ್ ಮೂಲಕ ಗೌಪ್ಯವಾಗಿ ನೀಡಬೇಕು. ಮಾದಕ ವ್ಯಸನಗಳ ಬಗ್ಗೆ ಹೆಚ್ಚಿನ ಜಾಗೃತಿ ವಹಿಸಬೇಕು.

> ಉಪನ್ಯಾಸ ನೀಡಿದ ಆಪ್ತಸಮಾಲೋಚಕ ಮಾದಕ ವ್ಯಸನ ಎಂಬ ಚಟವು ವ್ಯಸನಕ್ಕೊಳಗಾದ ವ್ಯಕ್ತಿಯನ್ನು ಬಾಧಿಸುವುದು ಮಾತ್ರವಲ್ಲದೆ ಅವರ ತಂದೆ ತಾಯಿಯು ನರಕಯಾತನೆ ಪಡುವಂತೆ ಮಾಡುತ್ತದೆ. ಪೋಷಕರ ಸಾಮಾಜಿಕ ಗೌರವಕ್ಕೆ ಧಕ್ಕೆ ಉಂಟುಮಾಡುತ್ತದೆ. –ರಫೀಕ್ ಮಾಸ್ಟರ್

ಕಾಲೇಜು ಸಂಯುಕ್ತ ಆಶ್ರಯದಲ್ಲಿ ನಡೆದ ಶ್ರೀ ಶ್ರೀ ಮ.ನಿ.ಪ್ರ ಡಾ. ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆ ಪ್ರಯುಕ್ತ ವ್ಯಸನಮುಕ್ತ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು. ದೇಶದ ಅಭಿವೃದ್ದಿಗೆ ಯುವ ಪೀಳಿಗೆ ಪ್ರಮುಖ ಶಕ್ತಿಯಾಗಿದ್ದು, ಅವರಿಗೆ ಮಾರ್ಗದರ್ಶನ ನೀಡಿದಾಗ ಉತ್ತಮ ಪಥದತ್ತ ಸಾಗುತ್ತಾ ದೇಶಕ್ಕೆ ಅತ್ಯುತ್ತಮ ಕೊಡುಗೆ ನೀಡಬಲ್ಲರು. ಎಳೆಯ ವಯಸ್ಸಿನಲ್ಲಿಯೇ ಮಾದಕ ವ್ಯಸನಗಳ ಬಗ್ಗೆ ಹಾಗೂ ಅದರಿಂದಾಗುವ ಘೋರ ಪರಿಣಾಮಗಳನ್ನು ತಿಳಿಸುವ ಅನಿವಾರ್ಯತೆ ಇದೆ. ಯಾರಾದರೂ ಮಾದಕ ವ್ಯಸನಗಳ ಆಮಿಷ ಒಡ್ಡಿಗಾದ ಅದನ್ನು ನಿರಾಕರಿಸಿ 'ಬೇಡ' ಎಂಬ ಕಠಿಣ ಸಂಕಲ್ಪ ಮಾಡಿ ಮುಂದುವರಿದರೆ ವ್ಯಸನ ಮುಕ್ತ ಸಮಾಜ ನಿರ್ಮಿಸಲು ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು.

ಇಂದಿನ ಯುವಪೀಳಿಗೆ ಯಾವುದೇ ದುಶ್ಚಟಗಳಿಗೆ ಬಲಿಯಾಗದೆ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಬೆಂಬಲ ನೀಡಿದರೆ ಮಹಾಂತ ಶಿವಯೋಗಿಗಳಿಗೆ ಗೌರವ ಸಲ್ಲಿಸಿದಂತಾಗುತ್ತದೆ ಎಂದು ಅವರು ಹೇಳಿದರು.

ಕೆನರಾ ಕಾಲೇಜಿನ ಪ್ರಾಂಶುಪಾಲೆ ಡಾ. ಪ್ರೇಮಲತಾ ವಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಜ್ಯೋತಿ ಕೆ ಉಳೆಪಾಡಿ, ಮನೋಶಾಸ್ತ್ರಜ್ಞ ಡಾ.ಸಾತ್ವಿಕ್, ಶಾಲಾ ಶಿಕ್ಷಣ ಇಲಾಖೆ ವಿಷಯ ಪರಿವೀಕ್ಷಕ ಪ್ರಕಾಶ್ ಮತ್ತಿತರರು ಇದ್ದರು. ಜಿಲ್ಲಾ ವಾರ್ತಾಧಿಕಾರಿ ಬಿ.ಎ ಖಾದರ್ ಶಾ ಸ್ವಾಗತಿಸಿದರು. ಕಾಲೇಜಿನ ಕನ್ನಡ ವಿಭಾಗದ ಉಪನ್ಯಾಸಕಿ ವೀಣಾ ನಿರೂಪಿಸಿ, ಉಪನ್ಯಾಸಕಿ ಪೂಜಾ ವಂದಿಸಿದರು.